


ಧರ್ಮಗುರು ಟೋನಿ ಅಲಾಮೊ | ಅಲಾಮೊ ಕ್ರೈಸ್ತ ರಾಷ್ಟ್ರ | ಸಂಪುಟ 17500

# ಬೆಂಕಿಯ ರಥಗಳು

**ಟೋನಿ ಅಲಾಮೊ ಅವರಿಂದ**

ಜನರು "ರಥ" ಎಂಬ ಪದವನ್ನು ನೋಡಿದಾಗ, ಅದಕ್ಕೆ ಒಂದೇ ಅರ್ಥವಿದೆ ಎಂದು ಅವರು ಭಾವಿಸುತ್ತಾರೆ, "ಪ್ರಾಚೀನ ಕಾಲದಲ್ಲಿ ಯುದ್ಧ ಮತ್ತು ಪಂದ್ಯಗಳಲ್ಲಿ ಬಳಸುತ್ತಿದ್ದ, ಮುಖ್ಯವಾಗಿ ಕುದುರೆಗಳು ಎಳೆಯುತ್ತಿದ್ದ ಎರಡು ಗಾಲಿಗಳ ಗಾಡಿ." *ವೆಬ್ಸ್ಟರ್ಸ್ ಡಿಕ್ಷನರಿ* "ಕಾರ್ ನೋಡಿ" ಎಂದು ಹೇಳುತ್ತದೆ. ನಾವು "ಕಾರ್" ನೋಡಿದಾಗ, ಅದು ಲ್ಯಾಟಿನ್ ಪದ "ಕಾರಸ್"ನಿಂದ ಹುಟ್ಟುತ್ತದೆ ಎಂದು ಕಾಣುತ್ತೇವೆ, ಅದರ ಅರ್ಥ "ರಥ". ರಥ ಎಂದರೆ ಈ ಅರ್ಥಗಳೂ ಇವೆ "(1) ಚಕ್ರಗಳ ಮೇಲೆ ಯಾವುದೇ ಗಾಡಿ; (2) ಅಡ್ಡಕಂಬಿಗಳ ಮೇಲೆ ಚಲಿಸುವ ಗಾಡಿ, ಉದಾ., ರಸ್ತೆ ರೈಲು ಬಂಡಿ, ಅಥವಾ ರೈಲು ಡಬ್ಬಿ; (3) ಮೋಟಾರು ಕಾರು; ಮತ್ತು (4) ಲಿಫ್ಟ್ ನಲ್ಲಿ ಪ್ರಯಾಣಿಕರಿಗಾಗಿ ಇರುವ ಅಂಕಣ." ಆಧುನಿಕ ಅರ್ಥವಿವರಣೆಯಲ್ಲಿ ವಿಮಾನಗಳು, ಯುಎಫ್‌ಓಗಳು, ಹಾರುವ ತಟ್ಟೆಗಳು, ಮತ್ತು ಜನರನ್ನು, ದೇವದೂತರನ್ನು ಒಯ್ಯುವ ಯಾವುದೇ ವಸ್ತು, ಇತ್ಯಾದಿಗಳು ಸೇರಿವೆ. "ರಥ" ಎಂಬ ಪದಕ್ಕೆ ಇಬ್ರಿಯ ಅನುವಾದವು "ಬಹುಸಂಖ್ಯೆ" ಅಥವಾ "ಹೇರುಬಂಡಿ" ಎಂದಾಗುತ್ತದೆ. ಆದ್ದರಿಂದ "ರಥ" ಎಂಬ ಪದಕ್ಕೆ ಹಲವಾರು ಅರ್ಥಗಳಿವೆ.



ಪ್ಯಾಸ್ಟರ್ ಅಲಾಮೊ ಮತ್ತು ಅವರ ದಿವಂಗತ ಪತ್ನಿ ಸೂಸನ್ ಅವರ ಅಂತಾರಾಷ್ಟ್ರೀಯ ದೂರವಾಣಿ ಕಾರ್ಯಕ್ರಮದಲ್ಲಿ, ಗ್ರ್ಯಾಂಡ್ ಓಲ್ ಓಪ್ರಿ, ನ್ಯಾಶ್ವಿಲ್, ಟೆನ್ನೆಸ್ಸೀ ಯಲ್ಲಿ ರೆಕಾರ್ಡ್ ಮಾಡಲಾಗಿತ್ತು   ಚಿತ್ರೀಕರಣ 1975

2 ಅರಸುಗಳು 6:15ರಲ್ಲಿ, ದೇವರ ಮನುಷ್ಯನ (ಎಲೀಷ) ಸೇವಕನು (ಅಥವಾ ಆಳು) ಬೆಳಿಗ್ಗೆ ಎದ್ದು ಹೊರಗೆ ಹೋದಾಗ, ರಥ ರಥಾಶ್ವಸಹಿತವಾದ ಮಹಾಸೈನ್ಯವು ಬಂದು ಪಟ್ಟಣದ ಸುತ್ತಲೂ ನಿಂತಿರುವುದನ್ನು ಕಂಡು (ಇವು ಬೆಂಕಿಯ ರಥಗಳಾಗಿರಲಿಲ್ಲ, ಏಕೆಂದರೆ ಅವು ಕೇವಲ ಮನುಷ್ಯರನ್ನು ಹೊತ್ತಿದ್ದವು) ಎಲೀಷನ ಸೇವಕನು (ಆಳು) ತನ್ನ ಯಜಮಾನನಿಗೆ – "ಅಯ್ಯೋ, ಸ್ವಾಮೀ, ಏನು ಮಾಡೋಣ?" ಎಂದನು. ಆಗ ಎಲೀಷನು ಅವನಿಗೆ – "ಹೆದರಬೇಡ; ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ" ಎಂದು ಹೇಳಿ – "ಯೆಹೋವನೇ, ಇವನು ನೋಡುವಂತೆ ಇವನ ಕಣ್ಣುಗಳನ್ನು ತೆರೆ" ಎಂದು ಪ್ರಾರ್ಥಿಸಲು ಯೆಹೋವನು ಅವನ ಕಣ್ಣುಗಳನ್ನು ತೆರೆದನು. ಆಗ ಎಲೀಷನ ರಕ್ಷಣೆಗಾಗಿ ಸುತ್ತಣ ಗುಡ್ಡೆಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ ರಥರಥಾಶ್ವಗಳು ಆ ಸೇವಕನಿಗೆ ಕಂಡವು. ಈ ರಥಗಳು ಅಶ್ಶೂರ್ಯರ ರಥಗಳಿಗಿಂತ ಭಿನ್ನವಾಗಿವೆ, ಏಕೆಂದರೆ ಈ ರಥಗಳು ದೇವದೂತರನ್ನು ಹೊತ್ತಿವೆ. ಅವು "ಬೆಂಕಿಯ ರಥಗಳು", ಮತ್ತು ಅವನ್ನು ನೋಡಲು ದೇವರು ನಮಗೆ ಅವಕಾಶ ನೀಡದ ಹೊರತು ಮನುಷ್ಯರ ಕಣ್ಣಿಗೆ ಅವು ಕಾಣುವುದಿಲ್ಲ. ಇಂದು ಆ ದಿವ್ಯ ಹಾರುವ ತಟ್ಟೆಗಳನ್ನು ನೋಡಲು ಆತ ಹೆಚ್ಚು ಹೆಚ್ಚು ಜನರಿಗೆ ಅವಕಾಶ ನೀಡುತ್ತಿದ್ದಾರೆ. ಯೇಸು ಭೂಮಿಗೆ ಪುನಃ ಬರುವ ಮೊದಲು ಅವು ಭೂಮಿಯ ಸಮೀಕ್ಷೆ ನಡೆಸುತ್ತಿವೆ, ಮತ್ತು ಅವು, ದೇವರ ಆದೇಶಗಳ ಪ್ರಕಾರ, ಜನರ ಧರ್ಮನಿಂದನೆ, ಮೂರ್ತಿಪೂಜೆ, ಮತ್ತು ಇತರ ಹಲವಾರು ಪಾಪ ಮಾರ್ಗಗಳ ಕಾರಣ ಭೂಮಿಯ ಮೇಲೆ ಅಲ್ಲಿ ಇಲ್ಲಿ ವಿಪತ್ತು ಉಂಟುಮಾಡುತ್ತಿವೆ.[1]

"ಯೇಸು ಕ್ರಿಸ್ತ" ಎಂಬ ಪದಗಳನ್ನು ನಂಬಿದರೆ ಸಾಕು, ನಾವು ರಕ್ಷಿತರಾಗುತ್ತೇವೆ ಎಂದು ಕೆಲವರು ನಂಬುತ್ತಾರೆ. ನಿಜ ಹೇಳಬೇಕೆಂದರೆ, ದೇವರು ಹೇಳುವುದರ ಅರ್ಥವೇನೆಂದರೆ, ನಮ್ಮ ಪ್ರಭು ಯೇಸು ಹೇಳಿದ್ದನ್ನು, ಮಾಡಿದ್ದನ್ನು, ಮತ್ತು ಈಗಲೂ ಆತನ ದೇಹವಾದ ಆತನ ಚರ್ಚ್, ಆತನ ಹೆಂಡತಿಯ ಮೂಲಕ ಮಾಡುತ್ತಿರುವ ಎಲ್ಲವನ್ನು ನಾವು ನಂಬಬೇಕು. ಇದೇ ಕಾರಣಕ್ಕಾಗಿ ಆತನನ್ನು ಆಸಕ್ತಿಯಿಂದ ಅನುಸರಿಸುವುದರಲ್ಲಿ ನಿರತರಾಗಿರಬೇಕು ಎಂದು ಆತ ಪ್ರಕಟನೆ ಪುಸ್ತಕದಲ್ಲಿ ನಮಗೆ ಹೇಳುತ್ತಾರೆ.[2]

ಆತನ ಹೆಸರನ್ನು ತಾವು ನಂಬುವುದಾಗಿ ಅನೇಕ ಜನರು ಘೋಷಿಸುತ್ತಾರೆ, ದೆವ್ವಗಳು ಕೂಡ ಆತನ ಹೆಸರನ್ನು ನಂಬುತ್ತವೆ, ಮತ್ತು ಹೆದರಿ ನಡುಗುತ್ತವೆ (ಯಾಕೋಬನು 2:19). ಆದಾಗ್ಯೂ, ನಾವು ಆಸಕ್ತಿಯಿಂದ ಆತನನ್ನು ಅನುಸರಿಸಬೇಕು ಮತ್ತು ಆತನ ಎಲ್ಲಾ ಆಜ್ಞೆಗಳನ್ನು ಪಾಲಿಸಬೇಕೆಂದು ತಾನು ಬಯಸುವುದಾಗಿ ಯೇಸು ಹೇಳುತ್ತಾರೆ![3] ಆತನ ಆಜ್ಞೆಗಳಲ್ಲಿ ಒಂದನ್ನು ಉಲ್ಲಂಘಿಸಿದರೂ, ಎಲ್ಲವನ್ನೂ ಉಲ್ಲಂಘಿಸಿದಂತೆ, ಏಕೆಂದರೆ ಆತನ ಆಜ್ಞೆಗಳಲ್ಲಿ ಒಂದನ್ನು ಉಲ್ಲಂಘಿಸಿದರೂ, ಅದು ನಮ್ಮ ಆತ್ಮಗಳನ್ನು ನಿರಂತರ ನರಕಕ್ಕೆ ಮತ್ತು ಶಾಶ್ವತವಾಗಿ ಬೆಂಕಿಯ ಕೆರೆಗೆ ಕಳುಹಿಸಲು ಸಾಕಾಗುತ್ತದೆ.[4] ಆದುದರಿಂದಲೆ ತಾನು ಹಾಸ್ಯ ಮಾಡುತ್ತಿಲ್ಲ ಎಂದು ಯೇಸು ನಮಗೆ ಎಚ್ಚರಿಕೆ ನೀಡುತ್ತಾರೆ. "ನಿನ್ನ

*(ಪುಟ 2ರಲ್ಲಿ ಮುಂದುವರಿದಿದೆ)*

**1** ಆದಿಕಾಂಡ. 19:1-25, ಅರಣ್ಯಕಾಂಡ. 22:1-35, 25:1-9, 2 ಸಮುವೇಲನು. 24:1-17, 2 ಅರಸುಗಳು 19:35, 1 ಪೂರ್ವಕಾಲವೃತ್ತಾಂತ 21:9-30, 2 ಪೂರ್ವಕಾಲವೃತ್ತಾಂತ 32:19-22, ಪ್ರಕಟನೆ 7:1-2, ಅಧ್ಯಾಯ 8, 9:1-5, 13-21, 14:8-11, 15-20, ಅಧ್ಯಾಯ 16, 18:1-2, 21, 19:17-21, 20:1-3, 21:9 **2** ಮತ್ತಾಯ 3:7-10, 7:13-23, ಯೋಹಾನ 14:12, 15, 21-24, 15:1-14, ರೋಮಾಪುರದವರಿಗೆ 12:5-21, ಗಲಾತ್ಯದವರಿಗೆ 5:14-26, ಎಫೆಸದವರಿಗೆ4:20-32, ತೀತನಿಗೆ 2:11-15, ಇಬ್ರಿಯರಿಗೆ 2:1-3, ಯಾಕೋಬನು 1:21-27, 1 ಪೇತ್ರನು 4:7-8, 2 ಪೇತ್ರನು 1:3-11, 1 ಯೋಹಾನ 2:3-11, 15-17, 3:4-12, ಪ್ರಕಟನೆ 3:14-22 **3** ಪ್ರಕಟನೆ 3:14-22 **4** ಯಾಕೋಬನು 2:10-11

# ಬೆಂಕಿಯ ರಥಗಳು

*(ಪುಟ 1 ರಿಂದ ಮುಂದುವರಿದಿದೆ)*

ಕೃತ್ಯಗಳನ್ನು ಬಲ್ಲೆನು [ನಾವು ಹೇಳುವ ಅಥವಾ ಮಾಡುವ ಎಲ್ಲವೂ ದೇವರಿಗೆ ತಿಳಿದಿದೆ]; ನೀನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ; ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇದ್ದರೆ ಒಳ್ಳೇದಾಗಿತ್ತು. ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರುಬೆಚ್ಚಗಿರುವುದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು" (ಪ್ರಕಟನೆ 3:15-16) ಎಂದು ಆತ ಹೇಳುತ್ತಾರೆ.

ನಾವು ಹೇಳುವ ಮತ್ತು ಮಾಡುವ ಎಲ್ಲವೂ ಪ್ರಭುವಿಗೆ ತಿಳಿಯುವುದು ಹೇಗೆ? ನಾವು ಹೇಳಿರುವ ಮತ್ತು ಮಾಡಿರುವ, ಅಥವಾ ಹೇಳಲಿರುವ ಮತ್ತು ಮಾಡಲಿರುವ ಎಲ್ಲವೂ ಒಂದು ಪುಸ್ತಕದಲ್ಲಿ ಬರೆಯಲ್ಪಟ್ಟಿದೆ ಎಂದು ನಮಗೆ ತಿಳಿದಿದೆ.[5] ದೇವರು ಎಲ್ಲಾ ಕಡೆಯಲ್ಲಿದ್ದಾರೆ, ಆತನನ್ನು ಹಿಡಿದಿರಲು ಬ್ರಹ್ಮಾಂಡಕ್ಕೆ ಸಾಧ್ಯವಿಲ್ಲ ಎಂದು ನಮಗೆ ತಿಳಿದಿದೆ.[6] ಆತ ಸರ್ವಶಕ್ತ ಕೂಡ, ಅಂದರೆ ಆತನ ಬಳಿ ಅಪರಿಮಿತ ಶಕ್ತಿ ಮತ್ತು ಅಧಿಕಾರವಿದೆ ಎಂದರ್ಥ. ಆತ ಸರ್ವಶಕ್ತ.[7] ಆತ ಸರ್ವವ್ಯಾಪಿ, ಅಂದರೆ ಏಕಕಾಲಕ್ಕೆ ಎಲ್ಲಾ ಕಡೆಗಳಲ್ಲಿದ್ದಾರೆ.[8] ನಾವು ಹೇಳುವ ಮತ್ತು ಮಾಡುವ ಎಲ್ಲದರ ಬಗ್ಗೆ ತಿಳಿದಿರುವುದು ದೇವರಿಗೆ ದೊಡ್ಡ ವಿಷಯವೇನಲ್ಲ, ಮತ್ತು ಸುಳ್ಳು ಹೇಳುವುದು ಆತನಿಗೆ ಅಸಾಧ್ಯ (ಇಬ್ರಿಯರಿಗೆ 6:18).

ನಾವಾಡುವ ಪ್ರತಿಯೊಂದು ವ್ಯರ್ಥ ಮಾತಿಗೆ ವಿಚಾರಣೆಗೆ ಒಳಗಾಗುತ್ತೇವೆ ಎಂದು ಯೇಸು ಹೇಳುವಾಗ, ನಾವು ಆತನನ್ನು ನಂಬುವುದು ಬಹಳ ಮುಖ್ಯ.[9] ಮತ್ತಾಯ 12:36 ಹೀಗೆಂದು ಹೇಳುತ್ತದೆ, "ಇದಲ್ಲದೆ ನಾನು ನಿಮಗೆ ಹೇಳುವುದೇನೆಂದರೆ ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು." ಪ್ರಕಟನೆ 20:11-12 ಹೀಗೆಂದು ಹೇಳುತ್ತದೆ, "ಆ ಮೇಲೆ ಬೆಳ್ಳಗಿರುವ ಮಹಾಸಿಂಹಾಸನವನ್ನೂ ಅದರ ಮೇಲೆ ಕೂತಿದ್ದಾತನನ್ನೂ ಕಂಡೆನು. ಆತನೆದುರಿನಿಂದ ಭೂಮ್ಯಾಕಾಶಗಳು ಓಡಿಹೋಗಿ ಇನ್ನು ಕಾಣಿಸದ ಹಾಗಾದವು. ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪುಸ್ತಕ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಮಾನವಾಯಿತು."

ಭೂಮಿಯ ಮೇಲಿರುವ ಪಾಪಿಗಳನ್ನು ಮತ್ತು ಪಾಪದ ಸ್ಥಳಗಳನ್ನು ನಾಶ ಮಾಡಲು ದೇವರು ತನ್ನ ದೇವದೂತರನ್ನು ಕಳುಹಿಸುತ್ತಾರೆ ಎಂದು ನಾನು ಬೇರೊಂದು ಸಾಹಿತ್ಯದ ತುಣುಕಿನಲ್ಲಿ ಬರೆದಿದ್ದೇನೆ.[10] ಸಂಪೂರ್ಣವಾದ, ಬಹಳ ಪಾತಕಿಯಾದ ಭೂಮಿಯ ವಿನಾಶದಲ್ಲಿ ದೇವದೂತರು ಸುರಿಸುವ ಏಳು ಉಪದ್ರವಗಳ ಮೊದಲ ಮತ್ತು ಎರಡನೆಯ ವಿಪತ್ತುಗಳ ಬಗ್ಗೆ ಪ್ರಕಟನೆ ಪುಸ್ತಕ ಹೇಳುತ್ತದೆ (ಪ್ರಕಟನೆ 8:6 ರಿಂದ 9:21, 11:14-19, 16:1-21).

ಒಬ್ಬ ದೇವದೂತನು 1,85,000 ಜನರ ಸನ್ಹೇರೀಬನ ಸೈನ್ಯವನ್ನು ಒಂದೇ ರಾತ್ರಿಯಲ್ಲಿ ನಾಶ ಮಾಡಿದನು. "ಅದೇ ರಾತ್ರಿಯಲ್ಲಿ ಯೆಹೋವನ ದೂತನು ಹೊರಟುಬಂದು ಅಶ್ಶೂರ್ಯರ ಪಾಳೆಯದಲ್ಲಿ ಒಂದು ಲಕ್ಷದ ಎಂಬತ್ತೈದು ಸಾವಿರ [1,85,000] ಮಂದಿ ಸೈನಿಕರನ್ನು ಸಂಹರಿಸಿದನು [ಕೊಂದನು]. ಅವರು ಬೆಳಿಗ್ಗೆ ಎದ್ದು ನೋಡುವಲ್ಲಿ ಪಾಳೆಯದ ತುಂಬಾ ಹೆಣಗಳಿದ್ದವು" (2 ಅರಸುಗಳು 19:35).[11] ದೇವರ ಇಚ್ಛೆಯ ವಿರುದ್ಧ ದಾವೀದನು ಇಸ್ರಾಯೇಲಿನ ಗಣತಿ ಮಾಡಿ ಪಾಪ ಮಾಡಿದಾಗ, ದೇವರು ಇಸ್ರಾಯೇಲಿನ ಮಕ್ಕಳ ಮೇಲೆ ವ್ಯಾಧಿಯನ್ನು ಬರಮಾಡಲು ಒಬ್ಬ ದೇವದೂತನನ್ನು ಕಳುಹಿಸಿದರು, ಅದು 70,000 ಇಸ್ರಾಯೇಲ್ಯರನ್ನು ಕೊಂದಿತು (2 ಸಮುವೇಲನು 24:15).

ಸರ್ವವ್ಯಾಪಿಯಾದ, ಒಂದೇ ಸಮಯದಲ್ಲಿ ಎಲ್ಲೆಡೆ ಇರುವ ದೇವರು, ಭೂಮಿಯ ಮೇಲಿರುವ ಜನರಿಗೆ ಶಾಪ ನೀಡಲು, ದುಷ್ಟರನ್ನು ನಾಶ ಮಾಡಲು ತನ್ನ ಸಿಬ್ಬಂದಿಯಾದ ದೇವದೂತರನ್ನು ಕಳುಹಿಸುತ್ತಾರೆ. ದೇವದೂತರು ಸಂದೇಶವಾಹಕರೂ ಆಗಿರುತ್ತಾರೆ, ಅವರನ್ನು ಮೇರಿ ಮತ್ತು ಎಲಿಜಬೆತ್ ರಂತಹ ಜನರಿಗೆ ಸಂತೋಷದ ಸಮಾಚಾರಗಳನ್ನು ತರಲು ಕೂಡ ಕಳುಹಿಸಲಾಗುತ್ತದೆ.[12]

ಈಗ, ಜ್ವಾಲೆಯಂತೆ ಉರಿಯುವ ಒಂದು ಬೆಂಕಿ ದೇವರಿಂದ ಬರುತ್ತದೆ ಎಂದು ಅಪೋಸ್ತಲನಾದ ಪೇತ್ರನು 2 ಪೇತ್ರನು 3:7-14ರಲ್ಲಿ ಉಲ್ಲೇಖಿಸುತ್ತಾರೆ: "ಆದರೆ ಈಗಿರುವ ಭೂಮ್ಯಾಕಾಶಗಳು ಅದೇ ವಾಕ್ಯದ ಬಲದಿಂದ ಬೆಂಕಿಯ ಮೂಲಕ ನಾಶವಾಗುವುದಕ್ಕೆ ಇಡಲ್ಪಟ್ಟಿವೆ; ಮತ್ತು ಭಕ್ತಿಹೀನರ ಶಿಕ್ಷಾವಿಧಿಯೂ ನಾಶವೂ ಉಂಟಾಗುವ ದಿನಕ್ಕಾಗಿ ಆ ಬೆಂಕಿ ಸಿದ್ಧವಾಗಿದೆ. ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಇವೆ ಎಂಬುದನ್ನು ಮಾತ್ರ ಮರೆಯಬೇಡಿರಿ. [ನಮ್ಮ ಬದುಕುಗಳು ಬಹಳ ಚಿಕ್ಕದಾಗಿರುವುದರಿಂದ ನಿಮ್ಮನ್ನು ಮತ್ತು ನನ್ನನ್ನು ನ್ಯಾಯವಿಚಾರಣೆಗೆ ಒಳಪಡಿಸಲು ದೇವರು ಅವಸರಪಡಬೇಕಾಗಿಲ್ಲ ಎಂಬುದಷ್ಟೇ ಇದರ ಅರ್ಥ.[13] ದೇವರು ಶಾಶ್ವತ; ಆತ ನಿತ್ಯಜೀವಿ.[14] ಕಣ್ಣನ್ನು ಒಂದೆರಡು ಸಲ ಮಿಟುಕಿಸುವಷ್ಟರಲ್ಲಿ ನೀವು ಮತ್ತು ನಾನು ಆತನ ಎದುರು ನಿಂತಿರುತ್ತೇವೆ ಎಂದು ಆತನಿಗೆ ತಿಳಿದಿದೆ.[15] ಆತನ ಬಳಿ ಬೇಕಾದಷ್ಟು ಸಮಯವಿದೆ. ಕಾಲ ಇಲ್ಲ ಎಂದಾದಾಗ, ಆತ ನಿಮ್ಮನ್ನು ಮತ್ತು ನನ್ನನ್ನು ನೋಡುತ್ತಾರೆ – ಬಹಳ ಬೇಗನೆ]. ಕರ್ತನು ತನ್ನ ವಾಗ್ದಾನವನ್ನು [ಆತನ ನ್ಯಾಯತೀರ್ಪು] ನೆರವೇರಿಸುವುದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥ ಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು [ನಮ್ಮ ನ್ಯಾಯತೀರ್ಪುಗಳ ಎರಡು ಮಿಟುಕಿಸುವಿಕೆಗಳ ಮೊದಲು] ಅಪೇಕ್ಷಿಸುತ್ತಾನೆ.

"ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು. ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವುದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ; ಆ ದಿನದಲ್ಲಿ ಆಕಾಶಮಂಡಲವು ಬೆಂಕಿ ಹತ್ತಿ ಲಯವಾಗಿ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವವು. ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವುದು. ಆದಕಾರಣ ಪ್ರಿಯರೇ, ನೀವು ಇವುಗಳನ್ನು ಎದುರುನೋಡುವವರಾಗಿರುವದರಿಂದ, ಶ್ರದ್ಧೆಯಿಂದಿರಿ, ದೇವರೊಂದಿಗೆ ಶಾಂತಿಯಿಂದಿರಿ, ಆತನೆದುರಿನಲ್ಲಿ ಪಾಪವಿಲ್ಲದವರೂ, ನಿರ್ದೋಷಿಗಳಾಗಿಯೂ ಇರಿ"

ಸಂಪೂರ್ಣ ಆಕಾಶ ಮತ್ತು ಭೂಮಿಯನ್ನು ಸುಡುವ ಮೇಲೆ ಹೇಳಲಾಗಿರುವ ಬೆಂಕಿಯಂತಲ್ಲದ ಮತ್ತೊಂದು ದೇವರ ಬೆಂಕಿ ಇದೆ. ಈ ರೀತಿಯ ಬೆಂಕಿಯ ಕೆಲವು ಉದಾಹರಣೆಗಳು ಇಲ್ಲಿವೆ. ಪ್ರಕಟನೆ 1:13-14, ಏಳು ಚರ್ಚುಗಳ ಸಂಕೇತವಾಗಿ ಏಳು ದೀಪಸ್ತಂಭಗಳ ನಡುವೆ ಒಂದಿತ್ತು ಎಂದು ಹೇಳುತ್ತದೆ, "ಮನುಷ್ಯಕುಮಾರನಂತೆ [ಯೇಸು] ಇರುವವನನ್ನೂ ಕಂಡೆನು. ಆತನು ನಿಲುವಂಗಿಯನ್ನು ತೊಟ್ಟು ಚಿನ್ನದ ಪಟ್ಟಿಯನ್ನು ಎದೆಗೆ ಕಟ್ಟಿಕೊಂಡಿದ್ದನು. ಆತನ ತಲೆಯ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು [ಪಶ್ಚಾತ್ತಾಪಪಡುವವರೆಲ್ಲರ ಪಾಪಗಳಿಗಾಗಿ ಜಗದುತ್ಪತ್ತಿಗೆ ಮೊದಲೇ ಕೊಲ್ಲಲ್ಪಟ್ಟ ದೇವರ ಕುರಿಯಾದಾತನು ಎಂಬುದರ ಸಂಕೇತ[16]]. ಆತನ ಕಣ್ಣುಗಳು ಬೆಂಕಿಯ ಉರಿಯಂತಿದ್ದವು....."

---

**5** ಧರ್ಮೋಪದೇಶಕಾಂಡ 31:21, 1ಅರಸುಗಳು 8:39, 2 ಅರಸುಗಳು 19:27, 1 ಪೂರ್ವಕಾಲವೃತ್ತಾಂತ 28:9, ಯೋಬನು 31:4, 34:21-22, 25, ಕೀರ್ತನೆಗಳು 44:21, 69:5, 139:1-16, 23-24, ಯೆಶಾಯ 29:15-16, ಯೆಹೆಜ್ಕೇಲನು 11:5, ಲೂಕ 16:15, ಅಪೋಸ್ತಲರ ಕೃತ್ಯಗಳು 15:18, ಇಬ್ರಿಯರಿಗೆ 4:13, 1 ಯೋಹಾನ 3:20, ಪ್ರಕಟನೆ 20:12-13 **6** 1 ಅರಸುಗಳು 8:27, 2 ಪೂರ್ವಕಾಲವೃತ್ತಾಂತ 2:6, ಕೀರ್ತನೆಗಳು 139:7-16, ಜ್ಞಾನೋಕ್ತಿಗಳು 15:3, 11, ಯೆರೆಮೀಯ 23:23-24 **7** ಆದಿಕಾಂಡ 17:1, 35:11-12, 1 ಪೂರ್ವಕಾಲವೃತ್ತಾಂತ 29:11-12, 2 ಪೂರ್ವಕಾಲವೃತ್ತಾಂತ 20:6, ಯೋಬನು 42:2, ಕೀರ್ತನೆಗಳು 104:1-32, ಯೆಶಾಯ 26:4, 40:12-18, 21-28, ಮತ್ತಾಯ 19:26, 24:30, 28:18, ಲೂಕ 1:37, ಯೋಹಾನ 17:2, ಅಪೋಸ್ತಲರ ಕೃತ್ಯಗಳು 26:8, ಎಫೆಸದವರಿಗೆ 1:19-22, ಕೊಲೊಸ್ಸೆಯವರಿಗೆ 1:12-19, 2:10, ಇಬ್ರಿಯರಿಗೆ 1:1-12, ಪ್ರಕಟನೆ 4:11, 16:9, 19:6 **8** ಕೀರ್ತನೆಗಳು 139:3-10, ಯೆರೆಮೀಯ 23:23-24, ಅಪೋಸ್ತಲರ ಕೃತ್ಯಗಳು 7:48-49, 17:24 **9** ಕೀರ್ತನೆಗಳು 19:14, ಮತ್ತಾಯ 12:36-37 **10** "ದ ಆರ್ಮಿ ಆಂಡ್ ಏರ್‌ಫೋರ್ಸ್ ಆಫ್ ಗಾಡ್ (ದ ವಾಚರ್ಸ್)," "ಹೆವೆನ್ಲಿ ಏಂಜಲ್ಸ್ ಹೂವರಿಂಗ್ ಓವರ್ ಅವರ್ ಪ್ಲ್ಯಾನೆಟ್," ಆದಿಕಾಂಡ 19:1-25, ವಿಮೋಚನಕಾಂಡ 33:1-3, 2 ಸಮುವೇಲನು ಅಧ್ಯಾಯ 24, 2 ಅರಸುಗಳು 6:8-17, 19:1-35, 2 ಪೂರ್ವಕಾಲವೃತ್ತಾಂತ 20:1-24, 32:1-22, ಕೀರ್ತನೆಗಳು 34:7, 35:4-6, ಜೆಕರ್ಯನು 1:7-21, ಮತ್ತಾಯ 13:36-43, 47-50, 16:27, ಅಪೋಸ್ತಲರ ಕೃತ್ಯಗಳು 12:21-23, ಯೂದನು 14-15, ಪ್ರಕಟನೆ 7:1-2, ಅಧ್ಯಾಯ 8, 9:1-5, 12-21, 14:8-11, 15-20, 15:1, ಅಧ್ಯಾಯ 16, 18:1-2, 21, 19:17-21, 20:1-3, 21:9 **11** 2 ಪೂರ್ವಕಾಲವೃತ್ತಾಂತ 32:19-21, ಯೆಶಾಯ 37:36 **12** ಆದಿಕಾಂಡ 16:6-15, 21:14-21, ನ್ಯಾಯಸ್ಥಾಪಕರು ಅಧ್ಯಾಯ 13, 1 ಅರಸುಗಳು 19:1-8, ದಾನಿಯೇಲನು ಅಧ್ಯಾಯ 6, ಮತ್ತಾಯ 1:18-25, 28:1-8, ಲೂಕ 1:5-20, 26-38, 2:7-16, ಅಪೋಸ್ತಲರ ಕೃತ್ಯಗಳು1:9-11, 10:3-6, 12:1-11, 27:9-44 **13** 1 ಪೂರ್ವಕಾಲವೃತ್ತಾಂತ 29:15, ಯೋಬನು 4:17-21, 7:6-10, 9:25-26, ಕೀರ್ತನೆಗಳು 22:29, 39:4-6, ಯೆಶಾಯ 2:22, 40:6-7, ಯಾಕೋಬನು 1:10-11, 4:14, 1 ಪೇತ್ರನು 1:24 **14** ವಿಮೋಚನಕಾಂಡ 15:18, ಧರ್ಮೋಪದೇಶಕಾಂಡ 32:39-40, ಯೋಬನು 36:26, ಕೀರ್ತನೆಗಳು 9:7, 10:16, 29:10, 45:6, 90:1-4, 93:2, 102:12, 24-27, 146:10, ಯೆಶಾಯ 44:6, ಪ್ರಲಾಪಗಳು 5:19, ದಾನಿಯೇಲನು 4:34, ಲೂಕ 1:33, ಇಬ್ರಿಯರಿಗೆ 1:10-12, 1 ತಿಮೊಥೆಯನಿಗೆ 1:17, 6:15-16, ಪ್ರಕಟನೆ 1:8, 17-18, 4:8-11 **15** ಕೀರ್ತನೆಗಳು 73:18-19, ಪ್ರಸಂಗಿ 12:13-14, ದಾನಿಯೇಲನು 7:9-10, ಅಪೋಸ್ತಲರ ಕೃತ್ಯಗಳು 17:30-31, ರೋಮಾಪುರದವರಿಗೆ 2:5-13, 16, 14:10-12, 1 ಕೊರಿಂಥದವರಿಗೆ 15:52, 2 ಕೊರಿಂಥದವರಿಗೆ 5:10, ಇಬ್ರಿಯರಿಗೆ. 10:26-31, ಪ್ರಕಟನೆ 11:18, 20:11-15

"ಅಲ್ಲಿ ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಯೆಹೋವನ ದೂತನು ಅವನಿಗೆ [ಮೋಶೆಗೆ] ಕಾಣಿಸಿಕೊಂಡನು. ಹೇಗೆಂದರೆ ಅವನು ಒಂದು ಮುಳ್ಳಿನ ಪೊದೆಯನ್ನು ಕಂಡನು. ಆ ಪೊದೆಯು ಬೆಂಕಿಯಿಂದ ಉರಿಯುತ್ತಿದ್ದರೂ ಅದು ಸುಟ್ಟುಹೋಗದೆ ಇತ್ತು" (ವಿಮೋಚನಕಾಂಡ 3:2).

"ಯೆಹೋವನು ಹಗಲುಹೊತ್ತಿನಲ್ಲಿ ದಾರಿತೋರಿಸುವುದಕ್ಕೆ ಮೇಘಸ್ತಂಭದಲ್ಲಿಯೂ ರಾತ್ರಿವೇಳೆಯಲ್ಲಿ ಬೆಳಕುಕೊಡುವದಕ್ಕೆ ಅಗ್ನಿಸ್ತಂಭದಲ್ಲಿಯೂ ಇದ್ದು ಅವರ [ಇಸ್ರಾಯೇಲ್ ದೇಶ] ಮುಂಭಾಗದಲ್ಲಿ ಹೋದನು" (ವಿಮೋಚನಕಾಂಡ 13:21).

"ಯೆಹೋವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು" (ವಿಮೋಚನಕಾಂಡ 24:17).

ಮತ್ತಾಯ 3:11ರಲ್ಲಿ ಸ್ನಾನಿಕನಾದ ಯೋಹಾನರು ಹೀಗೆಂದು ಹೇಳುತ್ತಾರೆ, "ನಾನಂತೂ ನೀವು ಪಶ್ಚಾತ್ತಾಪಪಟ್ಟುಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು [ಯೇಸು] ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನಮಾಡಿಸುವನು."

"ಆತನು [ಯೇಸು] ಅವರ ಸಂಗಡ ಊಟಕ್ಕೆ ಕೂತುಕೊಂಡಾಗ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಅವರಿಗೆ ಕೊಡುತ್ತಿರಲಾಗಿ ಅವರ ಕಣ್ಣುಗಳು ತೆರೆದವು, ಅವರು ಆತನ ಗುರುತನ್ನು ಹಿಡಿದರು; ಆತನು ಅವರ ಕಣ್ಣಿಗೆ ಮಾಯವಾದನು. ಆಗ ಅವರು ಒಬ್ಬರಿಗೊಬ್ಬರು ಹೇಳಿಕೊಂಡರು – ಆತನು ದಾರಿಯಲ್ಲಿ ನಮ್ಮ ಸಂಗಡ ಮಾತಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ?..." (ಲೂಕ 24:30-32).

2 ಅರಸುಗಳು 6:17ರಲ್ಲಿ, ತನ್ನ ಸೇವಕನ, ತನ್ನ ಆಳಿನ ಕಣ್ಣುಗಳನ್ನು ತೆರೆಯಲು ಎಲೀಷನು ದೇವರಲ್ಲಿ ಪ್ರಾರ್ಥಿಸಿದನು, "ಯೆಹೋವನೇ, ಇವನು ನೋಡುವಂತೆ ಇವನ ಕಣ್ಣುಗಳನ್ನು ತೆರೆ ಎಂದು ಪ್ರಾರ್ಥಿಸಲು ಯೆಹೋವನು ಅವನ ಕಣ್ಣುಗಳನ್ನು ತೆರೆದನು. ಆಗ ಎಲೀಷನ ರಕ್ಷಣೆಗಾಗಿ ಸುತ್ತಣ ಗುಡ್ಡಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ [ಪವಿತ್ರಾತ್ಮಕ್ಕೆ ಸಮಾನ, ಮೇಲಿನಿಂದ ನಮಗೆ ಶಕ್ತಿ ದೊರೆತಾಗ ಯೇಸು ನಮಗೆ ಸ್ನಾನ ಮಾಡಿಸುವ ಆ ಬೆಂಕಿ, ಪವಿತ್ರಾತ್ಮ ಮತ್ತು ಬೆಂಕಿಯಿಂದ ಸ್ನಾನ ಮಾಡಿಸುವುದು] ರಥರಥಾಶ್ವಗಳು [ಬಂಡಿಗಳು, ಯುಎಫ್‌ಒ ಗಳು, ಹಾರುವ ತಟ್ಟೆಗಳು] ಆ ಸೇವಕನಿಗೆ ಕಂಡವು."

ಅಪೊಸ್ತಲರ ಕೃತ್ಯಗಳು 1:7-9ರಲ್ಲಿ, ಯೇಸು ತನ್ನ ಶಿಷ್ಯರಿಗೆ ಹೀಗೆಂದರು, "ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳಿದುಕೊಳ್ಳುವುದು ನಿಮ್ಮ ಕೆಲಸವಲ್ಲ. ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು [ಬೆಂಕಿ ಮತ್ತು ಆಸಕ್ತಿ] ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯ ವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು. ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು; ಮೋಡವು ಆತನನ್ನು ಕವಿದುಕೊಂಡಿದ್ದರಿಂದ ಅವರ ಕಣ್ಣಿಗೆ ಮರೆಯಾದನು."

ಪವಿತ್ರಾತ್ಮವು ಯೇಸುವನ್ನು ಆಕಾಶಕ್ಕೆ ಕರೆದುಕೊಂಡು ಹೋಯಿತು. ಯುಎಫ್‌ಒ ಗಳನ್ನು, ಹಾರುವ ತಟ್ಟೆಗಳನ್ನು ಅಥವಾ ತಮ್ಮಲ್ಲಿ ದೇವದೂತರನ್ನು ಹೊತ್ತಿರುವ ಬೆಂಕಿಯ ರಥಗಳನ್ನು ಚಲಾಯಿಸುತ್ತಿರುವುದು ಪವಿತ್ರಾತ್ಮವೇ. ಅವು ಬೇರೆ ಯಾವುದೇ ಗ್ರಹದಿಂದ ಬಂದವುಗಳಲ್ಲ. ಅವು ದಿವ್ಯ – ಆಕಾಶದಿಂದ ಬಂದವು – ಸಮಯದ ಅಂತ್ಯಕ್ಕೆ ಕೆಲವೇ ಕ್ಷಣಗಳ ಮೊದಲು, ಯೇಸು ಪುನಃ ಭೂಮಿಗೆ ಬರುವ ಕೆಲವೇ ಕ್ಷಣಗಳ ಮೊದಲು ಭೂಮಿಯ ಸಮೀಕ್ಷೆ ನಡೆಸುತ್ತಿವೆ. ಮತ್ತಾಯದ 24ನೇ ಅಧ್ಯಾಯದಲ್ಲಿ ಯೇಸು ಉಲ್ಲೇಖಿಸಿದ ವೇದನೆಗಳನ್ನು ಕೂಡ ಅವರು ಕಾರ್ಯಗತಗೊಳಿಸುತ್ತಿದ್ದಾರೆ. ಇವು ಯೇಸುವಿನ ಪದಗಳು: "ಯಾರಾದರೂ ನಿಮ್ಮನ್ನು ಮೋಸಗೊಳಿಸಬಹುದು, ಎಚ್ಚರ. ಯಾಕೆಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು – ನಾನು ಕ್ರಿಸ್ತನು, ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು. ಇದಲ್ಲದೆ ಯುದ್ಧಗಳಾಗುವುದನ್ನೂ ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳನ್ನೂ ನೀವು ಕೇಳಬೇಕಾಗುವುದು. ಕಳವಳಪಡದಂತೆ ನೋಡಿಕೊಳ್ಳಿರಿ; ಯಾಕಂದರೆ ಹಾಗಾಗುವದು ಅಗತ್ಯ. ಆದರೂ ಇದು ಇನ್ನೂ ಅಂತ್ಯಕಾಲವಲ್ಲ. ಜನಕ್ಕೆ ವಿರೋಧವಾಗಿ ಜನರೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ದಂಗೆ ಏಳುವರು; ಮತ್ತು ಅಲ್ಲಲ್ಲಿ ಬರಗಳು ಬರುವವು, [ಉಪದ್ರವ ಎಂದರೆ ಮಾರಕ ಸಾಂಕ್ರಾಮಿಕ ರೋಗ; ಪ್ಲೇಗ್; ಹಾನಿಕಾರಕ ಎಂದು ಪರಿಗಣಿಸಲಾಗುವಂಥದ್ದು], ಭೂಕಂಪಗಳು ಆಗುವವು; ಇವೆಲ್ಲಾ ವೇದನೆಯ ಪ್ರಾರಂಭ" (ಮತ್ತಾಯ 24:4-8).

ನನ್ನ ಹೆಸರಿನ ನಿಮಿತ್ತ ನಿಮ್ಮನ್ನು [ನಿಜವಾದ ಕ್ರೈಸ್ತಮತೀಯರನ್ನು] ಎಲ್ಲಾ ಜನಾಂಗಗಳವರು ಹಗೆ ಮಾಡುವರು [ಏಕೆಂದರೆ ನೀವು ಯೇಸುವನ್ನು ಪ್ರೀತಿಸುತ್ತೀರಿ. ಇಲ್ಲಿ ನಡೆಯುವ ಎಲ್ಲವನ್ನು ಯೇಸು ಮತ್ತು ನಿಗಾವಹಿಸಿರುವವರು ನೋಡುತ್ತಿದ್ದಾರೆ]. ಆಗ ಅನೇಕರು ಜಿಗುಪ್ಸೆಪಡುತ್ತಾರೆ [ನಿಜವಾದ ಕ್ರೈಸ್ತಮತೀಯನಾಗುವುದರೊಂದಿಗೆ (ಕ್ಯಾಥೊಲಿಕ್ ಅಲ್ಲ) ಬರುವ ಶೋಷಣೆಯ ಕಾರಣ] ಒಬ್ಬರನ್ನೊಬ್ಬರು ಹಿಡುಕೊಡುವರು [ಅವರು ಮಾಡಿರುವಂತೆ]; ಒಬ್ಬರ ಮೇಲೊಬ್ಬರು ಹಗೆ ಸಾಧಿಸುವವರು [ಅವರು ಮಾಡುವಂತೆ]. ಬಹುಮಂದಿ ಸುಳ್ಳುಪ್ರವಾದಿಗಳು [ಸೈತಾನನಿಂದ] ಸಹ ಎದ್ದು ಅನೇಕರನ್ನು ಮೋಸಗೊಳಿಸುವರು. [ಪ್ರಕಟನೆ 12:9 ಹೀಗೆಂದು ಹೇಳುತ್ತದೆ, 'ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದಬ್ಬಲ್ಪಟ್ಟು (ಆಕಾಶದಿಂದ) ಭೂಮಿಗೆ ಬಿದ್ದಿತು; ಅದರ ದೂತರೂ ಅದರೊಂದಿಗೆ ದಬ್ಬಲ್ಪಟ್ಟರು.'] ಇದಲ್ಲದೆ ಅಧರ್ಮವು ಹೆಚ್ಚಾಗುವುದರಿಂದ ಬಹುಜನರ ಪ್ರೀತಿಯು ತಣ್ಣಗಾಗಿಹೋಗುವುದು. ಆದರೆ ಕಡೇವರೆಗೂ ತಾಳುವವನು ರಕ್ಷಣೆಹೊಂದುವನು. [ದೇವರು ಮತ್ತು ಬೆಂಕಿಯ ರಥಗಳು ಎಲ್ಲವನ್ನು ನೋಡುತ್ತಿದ್ದಾರೆ ಮತ್ತು ಕೇಳುತ್ತಿದ್ದಾರೆ]ಇದಲ್ಲದೆ ಪರಲೋಕ ರಾಜ್ಯದ ಈ ಸುವಾರ್ತೆಯನ್ನು [ಈ ಸತ್ಯಗಳು] ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ [ಲೋಕದ] ಅಂತ್ಯವು ಬರುವದು. ಆದ್ದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳು ಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವು-

*(ಪುಟ 4ರಲ್ಲಿ ಮುಂದುವರಿದಿದೆ)*

16 ಯೆಶಾಯ 53:4-12, ಯೋಹಾನ 1:29, 1 ಪೇತ್ರನು 1:18-19, ಪ್ರಕಟನೆಅಧ್ಯಾಯ 5, 6:16, 7:9-17, 12:11, 13:8, 14:1-4, 15:3, 17:14, 19:7-9, 21:9-27




## ಘಾನ

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ದೇಶಗಳಿಗಾಗಿ ನೀವು ಮಾಡುತ್ತಿರುವ ಒಳ್ಳೆಯ ಕೆಲಸಗಳಿಗಾಗಿ ದೇವರು ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲಿ. ನನ್ನ ಕ್ರೈಸ್ತದೇವಾಲಯ, ದ ಗ್ರೇಸ್ ಅವರ್ ಮಿನಿಸ್ಟ್ರಿ ಇಂಟರ್ನ್ಯಾಷನಲ್, ಘಾನ, 5,000ಕ್ಕೂ ಹೆಚ್ಚು ಜನರಿಗೆ ಟೋನಿ ಅಲಾಮೊ ಸುದ್ದಿಪತ್ರಿಕೆಗಳನ್ನು ವಿತರಿಸಲು ಮಾಫಿ-ಕುಮಾಸಿಯ ಸುತ್ತಮುತ್ತಲಿನ ಕೆಲವು ಪಟ್ಟಣಗಳಿಗೆ ಹೋಯಿತು. ನಾವು ಅವರಿಗೆ ಒಳ್ಳೆಯ ಸುದ್ದಿಯನ್ನು ಒಯ್ದೆವು, ಮತ್ತು 500 ಜನರು ತಮ್ಮನ್ನು ಕ್ರಿಸ್ತರಿಗೆ ಸಮರ್ಪಿಸಿದರು ಮತ್ತು ದೇವರ ಪದವನ್ನು ಅಧ್ಯಯನ ಮಾಡಲು ಮತ್ತು ಟೋನಿ ಅಲಾಮೊ ಅವರ ಮಿನಿಸ್ಟ್ರಿಗಾಗಿ ಪ್ರಾರ್ಥಿಸಲು ವಾರದಲ್ಲಿ ಮಂಗಳವಾರಗಳಂದು ಮತ್ತು ರವಿವಾರಗಳಂದು ಸಭೆ ಸೇರಲು ನಿರ್ಧರಿಸಿದರು. ಅವರಿಗಾಗಿ ಈ ವರ್ಷಕ್ಕೆ ನಮ್ಮ ವಿಷಯ : 2013 ದೈವದತ್ತ ಯಶಸ್ಸಿನ ವರ್ಷ (1 ಅರಸುಗಳು 8:56). ಗುಂಪಿನ ನಿರ್ದೇಶಕನಾಗಿ ನಾನು, 20,000 ಸಾಹಿತ್ಯದ ತುಣುಕುಗಳನ್ನು, ಆ ಗುಂಪಿಗೆ ಹೊಸ ನಾಯಕರಿಗಾಗಿ 50 ಬೈಬಲ್ ಗಳನ್ನು, ಮತ್ತು 11-20ನೇ ಫೆಬ್ರುವರಿ 2013ರಲ್ಲಿ ಬರಲಿರುವ ನಮ್ಮ ಬಯಲು ಹೋರಾಟಕ್ಕಾಗಿ ಮೆಸ್ಸೀಯ ಪುಸ್ತಕಗಳ 300 ಪ್ರತಿಗಳನ್ನು ಕೋರಲು, ಮತ್ತು ದೇವರು ನಮ್ಮ ಪ್ರಾರ್ಥನೆಯನ್ನು ಆಲಿಸಿ ಪ್ಯಾಸ್ಟರ್ ಅಲಾಮೊ ಅವರನ್ನು ಜೈಲಿನಿಂದ ಬಿಡುಗಡೆಗೊಳಿಸಬೇಕೆಂದು ದೇವರಲ್ಲಿ ಪುನಃ ಪ್ರಾರ್ಥಿಸಲು ಈ ಅವಕಾಶವನ್ನು ಬಳಸಲು ಇಚ್ಛಿಸುತ್ತೇನೆ.

ಸ್ಟೀಫನ್ ಕ್ವಾಬ್ಲ ಬೆವ್ ವೋಲ್ಟ ಪ್ರದೇಶ, ಘಾನ

# ಬೆಂಕಿಯ ರಥಗಳು

*(ಪುಟ 3 ರಿಂದ ಮುಂದುವರಿದಿದೆ)*

ದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ)" (ಮತ್ತಾಯ 24:9-15).

ಸಂಪೂರ್ಣ ಜಗತ್ತನ್ನು ಹಾಳು ಮಾಡುವ ಅಸಹ್ಯ ವಸ್ತುವೆಂದರೆ ರೋಮ್ ನಲ್ಲಿ, ವ್ಯಾಟಿಕನ್ ನಲ್ಲಿ ಪೋಪ್ ಅವರು ಮೃಗೀಯವಾದ ಒಂದು ವಿಶ್ವ ಸರ್ಕಾರವನ್ನು, ಹೊಸ ವಿಶ್ವ ಪಂಥವನ್ನು ರಚಿಸಲು ಎಲ್ಲಾ ದೇಶಗಳ ಅಧ್ಯಕ್ಷರನ್ನು ಒಟ್ಟುಗೂಡಿಸಿರುವುದು. ಇದು ಸೈತಾನನ ಆತ್ಮದಿಂದಾಗುವುದು.

ವ್ಯಾಟಿಕನ್ ನಿಂದ ಅಧಿಕೃತ ಪತ್ರಿಕಾ ಪ್ರಕಟನೆಯ ಬಗ್ಗೆ ಡಿಸೆಂಬರ್ 10, 2012ರ ತಾರೀಖಿನ ಒಂದು ಲೇಖನ ಇಲ್ಲಿದೆ: "ವ್ಯಾಟಿಕನ್ ವಿಶ್ವ ಸರ್ಕಾರ ಮತ್ತು ಒಂದು ಹೊಸ ವಿಶ್ವ ಪಂಥಕ್ಕಾಗಿ ಕರೆ ನೀಡಿದೆ," ಆಕ್ಟಿವಿಸ್ಟ್ ಪೋಸ್ಟ್ ಗಾಗಿ ಲೇಖಕರಾದ ಆಂಡ್ರ್ಯು ಪುಹಾನಿಕ್ ಅವರಿಂದ ಲಿಖಿತ. "ಕ್ಯಾಥೊಲಿಕ್ ಚರ್ಚ್ [ಕುಪಂಥ] ನ ನಾಯಕರಾದ ಪೋಪ್ ಬೆನೆಡಿಕ್ಟ್ XVI ಅವರು ವಿಶ್ವ ಸರ್ಕಾರ ಮತ್ತು ಒಂದು ಹೊಸ ವಿಶ್ವ ಪಂಥದ ರಚನೆಗಾಗಿ ಕರೆ ನೀಡಿದ್ದಾರೆ. ಸೋಮವಾರ, ಡಿಸೆಂಬರ್ 3, 2012ರಂದು ಪಾಂಟಿಫಿಕಲ್ ಕೌನ್ಸಿಲ್ ಫಾರ್ ಜಸ್ಟಿಸ್ ಅಂಡ್ ಪೀಸ್ ನಲ್ಲಿ ನೀಡಿದ ಭಾಷಣವೊಂದರಲ್ಲಿ, ಪೋಪರು "ಮನುಕುಲದ ಸಾಮಾನ್ಯ ಒಳಿತಿಗಾಗಿ' ಸೇವೆ ಸಲ್ಲಿಸಲು 'ಒಂದು ಸಂಬಂಧಪಟ್ಟ ಪ್ರಾಧಿಕಾರದೊಂದಿಗೆ ಒಂದು ವಿಶ್ವ ಸಮಾಜದ ರಚನೆ"ಗಾಗಿ ಕರೆ ನೀಡಿದರು.

ಸಾಮಾನ್ಯ ಒಳಿತೇ? ಪ್ರಕಟನೆ 16:1-2ರಲ್ಲಿ, ಈ ಮೃಗದಂತಹ, ಈ ಒಂದು ವಿಶ್ವ ಸರ್ಕಾರ, ಈ ಹೊಸ ವಿಶ್ವ ಪಂಥದಂತಹ ಕೇಡುಂಟುಮಾಡುವ ಸಂಸ್ಥೆಯನ್ನು ಸೇರಿದರೆ, ನಮ್ಮ ಗತಿಯನ್ನು ನಾವೇ ನಿರ್ಧರಿಸಿದಂತೆ ಎಂದು ದೇವರು ಹೇಳಿದರು: "ಆಗ ಪವಿತ್ರಸ್ಥಾನದಿಂದ ಬಂದ ಮಹಾಶಬ್ದವನ್ನು ಕೇಳಿದೆನು. ಅದು ಆ ಏಳು ಮಂದಿ ದೇವದೂತರಿಗೆ – ನೀವು ಹೋಗಿ ಆ ಏಳು ಪಾತ್ರೆಗಳಲ್ಲಿರುವ ದೇವರ ಕೋಪಾಗ್ನಿಯನ್ನು ಭೂಮಿಯ ಮೇಲೆ ಹೊಯ್ಯಿರಿ ಎಂದು ಹೇಳಿತು. ಆಗ ಮೊದಲನೆಯವನು ಹೊರಟು ತನ್ನ ಪಾತ್ರೆಯಲ್ಲಿದ್ದುದನ್ನು ಭೂಮಿಗೆ ಹೊಯ್ದನು; ಕೂಡಲೇ ಮೊದಲನೆಯ ಮೃಗದ ಗುರುತನ್ನು [ಇದು ಪುನಃ ಒಂದು ವಿಶ್ವ ಸರ್ಕಾರದ, ಹೊಸ ವಿಶ್ವ ಪಂಥದ ಗುರುತಾಗಿದೆ] ಹೊಂದಿ ಅದರ ವಿಗ್ರಹಕ್ಕೆ ಆರಾಧನೆ ಮಾಡುವ ಮನುಷ್ಯರ ಮೈಮೇಲೆ [ಇದು ಮೋಸಕ್ಕೊಳಗಾದ, ರಕ್ಷಣೆ ಹೊಂದದ ಜನರ ಸಂಪೂರ್ಣ ಜಗತ್ತು] ಕೆಟ್ಟ ಉರಿಹುಣ್ಣು ಎದ್ದಿತು."

ಪ್ರಕಟನೆ 19:20 ಹೀಗೆಂದು ಹೇಳುತ್ತದೆ, "ಆಗ ಮೃಗವು [ರೋಮ್ ನಾಯಕತ್ವದ ಒಂದು ವಿಶ್ವ ಸರ್ಕಾರ, ಹೊಸ ವಿಶ್ವ ಪಂಥ[17]] ಸೆರೆಸಿಕ್ಕಿತು; ಇದಲ್ಲದೆ ಮೃಗದ ಮುಂದೆ ಮಹತ್ಕಾರ್ಯಗಳನ್ನು [ಮೇರಿಯ ಪ್ರಕಟಣೆ, ಯೇಸುವಿನ ಮೂರ್ತಿಗಳು ಶಿಲುಬೆಯ ಮೇಲೆ ರಕ್ತ ಕಾರುವುದು, ಮತ್ತು ಆಕೆಯ ಕೈಗಳು ರಕ್ತ ಕಾರುವ ಮೇರಿಯ ಮೂರ್ತಿಗಳಂತಹ ಸುಳ್ಳು ಪವಾಡಗಳು] ಮಾಡಿ ಮೃಗದ ಗುರುತು ಹಾಕಿಸಿಕೊಂಡವರನ್ನೂ [ಸೈತಾನನು ಮೋಸಗೊಳಿಸಿರುವ ಜನರ ಸಂಪೂರ್ಣ ಜಗತ್ತು] ಅದರ ವಿಗ್ರಹಕ್ಕೆ ಆರಾಧನೆ ಮಾಡಿದವರನ್ನೂ [ಅವನ ಸರ್ಕಾರದಲ್ಲಿ ಸೇವೆ ಸಲ್ಲಿಸಿದವರು, ಮತ್ತು ಅವನ ವೇತನದಾರರು] ಮರುಳುಗೊಳಿಸಿದ ಆ ಸುಳ್ಳುಪ್ರವಾದಿಯೂ [ರೋಮನ್ ಕ್ಯಾಥೊಲಿಕ್ ಚರ್ಚ್ ಕುಪಂಥ ಇದಾಗಿದೆ] ಅದರ ಜೊತೆಯಲ್ಲಿ ಸೆರೆಸಿಕ್ಕಿದನು. ಇವರಿಬ್ಬರೂ ಜೀವಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು."

ಈ ಪೋಪ್ ಮಾಡುತ್ತಿರುವುದು ಮತ್ತು ಹೇಳುತ್ತಿರುವುದು, ಮೋಸಗೊಂಡಿರುವ ಜಗತ್ತು ತಮ್ಮ ಕೈ ಅಥವಾ ಹಣೆಯ ಮೇಲೆ ಮೃಗದ ಗುರುತನ್ನು ತೆಗೆದುಕೊಳ್ಳಲು ಬೇಗನೆ ಒಯ್ಯುತ್ತಿದೆ. ಈ ಗುರುತನ್ನು ತೆಗೆದುಕೊಳ್ಳುತ್ತಿರುವ ಎಲ್ಲರೂ ಪವಿತ್ರಾತ್ಮನನ್ನು ನಿಂದಿಸಿದಂತೆ, ಮತ್ತು ಈ ಪೋಪ್ ಹಲವರನ್ನು ಶಾಂತಿ ಮತ್ತು ಸುರಕ್ಷತೆಯ ಹೆಸರಿನಲ್ಲಿ ಮೋಸಗೊಳಿಸುತ್ತಿದ್ದಾರೆ.[18] ಪ್ರಕಟನೆ 13:16-17 ಹೀಗೆಂದು ಹೇಳುತ್ತದೆ, "ಈ ಎರಡನೆಯ ಮೃಗವು [ಪೋಪ್ ಅವರಲ್ಲಿ, ಆತನ ಚರ್ಚ್ ನಲ್ಲಿ, ಮತ್ತು ಆತನ ಹೊಸ ವಿಶ್ವ ಪಂಥದಲ್ಲಿ, ಒಂದು ವಿಶ್ವ ಸರ್ಕಾರದಲ್ಲಿ ಮೈದಳೆದಿರುವ ಸೈತಾನ] – ದೊಡ್ಡವರು ಮತ್ತು ಚಿಕ್ಕವರು, ಐಶ್ವರ್ಯವಂತರು ಮತ್ತು ಬಡವರು, ಸ್ವತಂತ್ರರು ಮತ್ತು ದಾಸರು ಎಲ್ಲರೂ ತಮ್ಮ ತಮ್ಮ ಬಲಗೈಯ ಮೇಲಾಗಲಿ ಹಣೆಯ ಮೇಲಾಗಲಿ ಗುರುತು ಹೊಂದಬೇಕೆಂದೂ ಆ ಗುರುತು ಯಾರಿಗಿಲ್ಲವೋ ಅವರು ಕ್ರಯ ವಿಕ್ರಯಗಳನ್ನು ನಡೆಸಕೂಡದೆಂದೂ ಆಜ್ಞೆಮಾಡುತ್ತದೆ.

ತನ್ನ ಅಧಿಕೃತ ಪತ್ರಿಕಾ ಪ್ರಕಟಣೆಯಲ್ಲಿ, ಪೋಪರು, ಇದು "ಜಾಗತಿಕ ಶಾಂತಿ ಮತ್ತು ನ್ಯಾಯ-

**17** ಪ್ರಕಟನೆ 17:1-9, 15-18, 18:1-10, 15-19, 24, 19:1-3 **18** ಯೆರೆಮೀಯ 6:13-14, 8:11, ಯೆಹೆಜ್ಕೇಲನು 13:9-10, ಮತ್ತಾಯ 10:34, 1 ಥೆಸಲೋನಿಕದವರಿಗೆ 5:1-9

## ಕ್ಯಾಲಿಫೋರ್ನಿಯ

ಅಲಾಮೊ ಚರ್ಚ್,

ಸಾಹಿತ್ಯದ ಹಿಂದಿನ ಡಬ್ಬಿಗಾಗಿ ಧನ್ಯವಾದಗಳು. ನಾನು ಮತ್ತೊಂದು ಡಬ್ಬಿಯನ್ನು ಬಳಸಬಹುದು. ನನ್ನ ಬಳಿ ಸಾಹಿತ್ಯದ ಕೇವಲ ಮೂರು ತುಣುಕುಗಳು ಉಳಿದಿವೆ!

ನಾನು ಅನೇಕ ಕಾರುಗಳನ್ನು ನೋಡಿದಾಗ, ನಾನು ಅವನ್ನು ವಿಂಡ್ ಶೀಲ್ಡ್ ಗಳ ಮೇಲೆ ಹಾಕಬೇಕು! ಬೀಜವನ್ನು ಬಿತ್ತುವುದರ ಬಗ್ಗೆ ಪ್ಯಾಸ್ಟರ್ ಅಲಾಮೊ ಅವರ ಟೇಪ್ ನನ್ನ ಜೀವನದ ಮೇಲೆ ದೊಡ್ಡ ಪ್ರಭಾವ ಬೀರಿತು."ನಿಮಗೆ ಸಾಧ್ಯವಾದಾಗ ಏನನ್ನಾದರೂ ಮಾಡಿ" ಎಂದು ಕೂಡ ಪ್ಯಾಸ್ಟರ್ ಟೋನಿ ಹೇಳಿದರು. ನಿನ್ನೆ ನಾನು, ಅನೇಕ ಕಾರುಗಳಿರುವ ಒಂದು ಲುಥೆರನ್ ಚರ್ಚ್ ಶಾಲೆ ಮತ್ತು ಕಾಲೇಜನ್ನು, ಮತ್ತು ನಂತರ ಸೀಲ್ ಬೀಚ್ ಹಡಗುಕಟ್ಟೆ ಪ್ರದೇಶವನ್ನು ನೋಡಿದೆ ಮತ್ತು ನನ್ನ ಬಳಿ ಇದ್ದ ಸಾಹಿತ್ಯ ಮುಗಿದು ಹೋಯಿತು! ಅದು ಪ್ರಭುವಿನಲ್ಲಿ ಒಂದು ಬಹಳ ಒಳ್ಳೆಯ ದಿನವಾಗಿತ್ತು ಮತ್ತು ನನ್ನ ಅಚ್ಚುಮೆಚ್ಚಿನ ಆಟವಾದ "ಪಿಶಾಚಿಯ ಕುಂಡೆಗೆ ಒದೆ"ಯುವುದನ್ನು ನಿಜವಾಗಿಯೂ ಬಹಳ ಆನಂದಿಸಿದೆ, ಮತ್ತು ಪ್ಯಾಸ್ಟರ್ ಟೋನಿ ಹೇಳಿದಂತೆ, "ಅದು ನನಗೆ ಬಹಳ ಸಂತೋಷ ಕೊಡುತ್ತದೆ." ನಿಮಗೆ ತಿಳಿದಿರುವಂತೆ, ಬಹಳಷ್ಟು ಜನರು ವ್ಯಾಟಿಕನ್-ನಿಯಂತ್ರಿತ ಮಾಧ್ಯಮದ ಮೂಲಕ ಟೋನಿ ಅವರ ಬಗ್ಗೆ ಕೇಳುತ್ತಾರೆ! ನಾನು ಈ ಜನರಿಗೆ ಸಾಹಿತ್ಯವನ್ನು ಕೊಟ್ಟಾಗ, ಅವರು ಪ್ಯಾಸ್ಟರ್ ಅಲಾಮೊ ಬಗ್ಗೆ ವಾಸ್ತವಿಕ ಸತ್ಯವನ್ನು ಕೇಳುತ್ತಾರೆ ಎಂಬುದನ್ನು ಖಚಿತಪಡಿಸುತ್ತೇನೆ! ಅವರು ಆತನ ಮೇಲೆ ಮಾಡುವ ಚಾರಿತ್ರ್ಯ ವಧೆ ಆಂದೋಲನವು ಸಂಪೂರ್ಣವಾಗಿ ಸುಳ್ಳು ಮತ್ತು ಸೈತಾನನ ಕುಪಂಥವಾದ ವ್ಯಾಟಿಕನ್ ಅನ್ನು ಬಹಿರಂಗಪಡಿಸಿದ್ದಕ್ಕೆ ಆತ ಸಾರ್ವಜನಿಕ ವೈರಿ #1 ಆದ ಕಾರಣ ಅವರು ಆತನನ್ನು ದ್ವೇಷಿಸುತ್ತಾರೆ (ಯೇಸುವನ್ನು ದ್ವೇಷಿಸಿದಂತೆ).

ಪ್ಯಾಸ್ಟರ್ ಅಲಾಮೊ ಹೇಳಿದಂತೆ, ಇದು ಮಾತಿನ ಸಮರ, ದೇವರ ಸತ್ಯಗಳ ವಿರುದ್ಧ ಸೈತಾನನ ಸುಳ್ಳುಗಳು! ಆದರೆ ನಾನು ಯಾರಿಗೆ ಸಾಹಿತ್ಯವನ್ನು ಕೊಡುತ್ತೇನೋ ಅವರಲ್ಲಿ ಹಲವರು ಅಲಾಮೊ ಮಿನಿಸ್ಟ್ರಿಯ ಬಗ್ಗೆ ವಾಸ್ತವಿಕ ಸತ್ಯವನ್ನು ಕೇಳುತ್ತಿದ್ದಾರೆ! ಟೋನಿ ಅವರಿಗೆ ಹಿಂಸೆ ನೀಡಿದಷ್ಟೂ, ಆತ ಪ್ರಭುವಿನ ಮನುಷ್ಯ ಎಂದು ನಾನು ಹೆಚ್ಚು ತಿಳಿದುಕೊಳ್ಳುತ್ತೇನೆ. ಆತ ನಿಜವಾಗಿಯೂ ದೇವರ ಪ್ರವಾದಿ ಎಂದು ತಿಳಿಯಲು ನೀವು ಸಂದೇಶಗಳನ್ನು ಕೇಳಬೇಕು ಅಷ್ಟೆ! ಇತರರು ರಕ್ಷಣೆ ಹೊಂದಿ ಶಾಶ್ವತವಾಗಿ ಪರಲೋಕಕ್ಕೆ ಹೋಗಲು, ಮತ್ತು ನಿರಂತರವಾಗಿ ಉರಿಯುವ ನರಕದಿಂದ ಪಾರಾಗಲು ನೀವು ನಿಮ್ಮ ಬದುಕನ್ನು ದೇವರಿಗೆ ಅರ್ಪಿಸಿದ್ದಕ್ಕೆ, ಪ್ಯಾಸ್ಟರ್ ಟೋನಿ ಅವರೇ, ಪರಲೋಕದಲ್ಲಿ ನಿಮಗೆ ಶ್ರೇಷ್ಠ ಪ್ರತಿಫಲ ದೊರಕುವುದು. ಅವರು ನಿಮ್ಮನ್ನು ಕೊಲೆಗೈದರೂ ಸಹ, ನೀವು ಸ್ಥಾಪಿಸಿದ ದೇವರ ಕೆಲಸವು ಶಾಶ್ವತವಾದ ಸುವಾರ್ತೆಯನ್ನು ಬೋಧಿಸುವುದರ ಮೇಲೆ ಮುಂದುವರಿಯುತ್ತದೆ ಎಂದು ನನಗೆ ತಿಳಿದಿದೆ! ದೇವರ ನಿಜವಾದ ಕೆಲಸವನ್ನು ನಿಲ್ಲಿಸಲು ಸೈತಾನನಿಗೆ ಸಾಧ್ಯವಿಲ್ಲ! ಪ್ಯಾಸ್ಟರ್, ಪ್ಯಾಸ್ಟರ್ ನೀವು ಕಾರಾಗೃಹದಲ್ಲಿದ್ದರೂ, ನಿಮ್ಮ ಸಾಹಿತ್ಯದ ಮೂಲಕ, ಮತ್ತು ನಿಮ್ಮಂತಿರುವ ಸಮರ್ಪಿತ ಕ್ರೈಸ್ತಮತೀಯರಿಂದ, ವಿಶ್ವದಾದ್ಯಂತ ಸುವಾರ್ತೆಯನ್ನು ಹಿಂದಿಗಿಂತ ಹೆಚ್ಚು ಬಲವಾಗಿ ಇನ್ನೂ ಬೋಧಿಸಲಾಗುತ್ತಿದೆ. ಸೈತಾನನು ಸೋತ ವೈರಿಯಾಗಿದ್ದಾನೆ. ದೇವರ ದಯೆ!

ಮಹಾ ಜಾರಸ್ತ್ರೀಯಾದ ವ್ಯಾಟಿಕನ್ ಬದಲಾಗಿಲ್ಲ ಮತ್ತು ಎಂದೂ ಬದಲಾಗುವುದೂ ಇಲ್ಲ! ದೇವರು ಪ್ಯಾಸ್ಟರ್ ಅಲಾಮೊ ಅವರನ್ನು ಈ ಪೈಶಾಚಿಕ ಮೃಗದಿಂದ ರಕ್ಷಿಸುತ್ತಾರೆ ಎಂದು ಪ್ರಾರ್ಥಿಸುತ್ತೇನೆ ಮತ್ತು ಆತ ರಕ್ಷಿಸುತ್ತಾರೆ ಎಂಬ ಭರವಸೆ ನನಗಿದೆ! "ನಿನ್ನನ್ನು ಎದುರಿಸಲು ಕಲ್ಪಿಸಿದ ಯಾವ ಆಯುಧವೂ ಜಯಿಸದು". ಎಂತಹ ಭರವಸೆ! "ನಾನು ಅಭಿಷೇಕಿಸಿದವರನ್ನು ಮುಟ್ಟಬಾರದು, ನನ್ನ ಪ್ರವಾದಿಗಳಿಗೆ ಯಾವ ಕೇಡನ್ನೂ ಮಾಡಬಾರದು." ಪ್ರಕಟನೆ 18:24 ಹೀಗೆಂದು ಹೇಳುತ್ತದೆ, "ಪ್ರವಾದಿಗಳ ರಕ್ತವೂ ದೇವಜನರ ರಕ್ತವೂ ಭೂಮಿಯ ಮೇಲೆ ಕೊಲ್ಲಲ್ಪಟ್ಟವರೆಲ್ಲರ ರಕ್ತವೂ ನಿನ್ನಲ್ಲಿ [ ವ್ಯಾಟಿಕನ್] ಸಿಕ್ಕಿತು." ಆದರೆ ಕೊನೆಯಲ್ಲಿ ಯಾರು ಗೆಲ್ಲುತ್ತಾರೆ ಎಂದು ನಮಗೆ ಗೊತ್ತು ಮತ್ತು ಅದು ಖಂಡಿತ ಪಿಶಾಚಿ ಅಲ್ಲ! ಮುಂದುವರಿಯುವುದನ್ನು ಮುಂದುವರಿಸಿ! ಚರ್ಚ್, ಮತ್ತು ಟೋನಿ, ನೀವು ಮುಂದುವರಿಯುತ್ತೀರಿ ಎಂದು ನನಗೆ ಗೊತ್ತು. ಟೋನಿ ಅವರು ಹೇಳಿದಂತೆ, "ಹೊಸ ದ್ವೇಷ ಕಾನೂನಿನ ಬಗ್ಗೆ ನೀವು ಖಂಡಿತವಾಗಿ ಕೇಳಿರಬಹುದು – ನೀವು ಸಲಿಂಗ ವಿವಾಹಕ್ಕೆ ವಿರುದ್ಧವಾಗಿದ್ದರೆ ಅದು ಅಪರಾಧವಾಗುತ್ತದೆ." ಖಂಡಿತವಾಗಿ ಅದನ್ನು ಬೇಗನೆ ಅನುಷ್ಠಾನಗೊಳಿಸುತ್ತಾರೆ.

ಪುನಃ ಇವೆಲ್ಲದಕ್ಕಾಗಿ ಧನ್ಯವಾದಗಳು. ನಾನು ಸೈತಾನನ ಮೇಲೆ ದಾಳಿ ಮುಂದುವರಿಸಲು ಸಾಧ್ಯವಾಗುವುದಕ್ಕಾಗಿ ಸಾಹಿತ್ಯಕ್ಕಾಗಿ ಎದುರು ನೋಡುತ್ತಿದ್ದೇನೆ! ಪ್ರಭುವನ್ನು ಸ್ತುತಿಸಿ!

ಡಬ್ಲ್ಯು. ಡಿ.    ಲೇಕ್ ವುಡ್, ಕ್ಯಾಲಿಫೋರ್ನಿಯ

ವನ್ನು ಕಾಪಾಡುವ ಒಂದು ಮಾರ್ಗ" ಎಂದು ಕೂಡ ಹೇಳುತ್ತಾರೆ ['ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ಕೆಟ್ಟ ಇಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸ್ವಭಾವಾನುಸಾರವಾಗಿ ಸುಳ್ಳನ್ನು ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲ ಪುರುಷನೂ ಆಗಿದ್ದಾನೆ' (ಯೋಹಾನ 8:44)]. ವಿಶ್ವ ಸರ್ಕಾರ ಮತ್ತು ಒಂದು ಹೊಸ ವಿಶ್ವ ಪಂಥಗಳ ಸ್ಥಾಪನೆಗಾಗಿ ಪೋಪರ ದೃಷ್ಟಿಯು ಬಹುಶಃ ಒಂದು ಹೊಸ ಮಹಾಶಕ್ತಿಯನ್ನು ಸೃಷ್ಟಿಸುವುದಕ್ಕಲ್ಲ, ಆದರೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಜವಾಬ್ದಾರಿ ಇರುವವರಿಗೆ (ಮೋಸಗೊಳಿಸುವ ರಾಜಕಾರಣಿಗಳು) ನ್ಯಾಯತೀರ್ಪಿಗಾಗಿ ಮಾನದಂಡಗಳನ್ನು, ಮತ್ತು ಕಾರ್ಯೋಪಯೋಗಿ ಮಾರ್ಗದರ್ಶಿ ಸೂತ್ರಗಳನ್ನು ನೀಡುವ ಒಂದು ಹೊಸ ಆಡಳಿತ ಮಂಡಳಿಯನ್ನು ರಚಿಸುವುದಾಗಿದೆ [ಅದು ದಂಡನೆಗೆ ಗುರಿಯಾದ, ರಕ್ಷಣೆ ಹೊಂದದ ಜಗತ್ತಿಗಾಗಿದೆ (ಆದರೆ ಸಂತರಿಗೆ ವಿಮೋಚನೆಯೊಂದಿಗೆ)]. 'ಪ್ರಸ್ತಾವಿತ ಮಂಡಳಿಯು (ವಿಶ್ವ ಸರ್ಕಾರ) ಕೆಲವರ ಕೈಗಳಲ್ಲಿ ಕೇಂದ್ರೀಕೃತವಾದ, ಎಲ್ಲಾ ಜನರ ಮೇಲೆ ಆಡಳಿತ ನಡೆಸುವ, ಅತ್ಯಂತ ದುರ್ಬಲರನ್ನು ಶೋಷಿಸುವ [ಅವರು ಇದನ್ನೇ ಮಾಡಲು ಯೋಜಿಸುತ್ತಿದ್ದಾರೆ ಮತ್ತು ಮಾಡುತ್ತಿದ್ದಾರೆ] ಮಹಾಶಕ್ತಿಯಾಗಿರುವುದಿಲ್ಲ' ಎಂದು ಪೋಪ್ ಹೇಳಿದ್ದನ್ನು ಉಲ್ಲೇಖಿಸಲಾಯಿತು. ಪೋಪರು ತಮ್ಮ ದೃಷ್ಟಿಯನ್ನು 'ನೈತಿಕ [ಅನೈತಿಕ] ಪಡೆ' ಅಥವಾ 'ನ್ಯಾಯಸಮ್ಮತವಾದುದಕ್ಕೆ ಅನುಸಾರವಾಗಿ ಪ್ರಭಾವ ಬೀರುವ ಶಕ್ತಿಯುಳ್ಳ ನೈತಿಕ ಪ್ರಾಧಿಕಾರ [ಆತ ಅಷ್ಟು ನೀತಿವಂತರಾಗಿದ್ದರೆ, ಈ ಸರ್ಕಾರ ಸಾರ್ವಜನಿಕ ಶಾಲೆಗಳಲ್ಲಿ ಅಥವಾ ನ್ಯಾಯಾಲಯಗಳಂತಹ ಸರ್ಕಾರಿ ಕಟ್ಟಡಗಳಲ್ಲಿ ದಶಾಜ್ಞೆಗಳಿಗೆ ಅನುಮತಿ ಏಕೆ ಕೊಡುವುದಿಲ್ಲ?], ಅಂದರೆ, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಕಾನೂನಿನಿಂದ ಸೀಮಿತವಾದ ಒಂದು ಸಹಯೋಗಿ ಪ್ರಾಧಿಕಾರ ಅಥವಾ ನೈತಿಕ ಪ್ರಾಧಿಕಾರ'[19] ಎಂದು ಕೂಡ ವಿವರಿಸಿದರು.

ಸೈತಾನನ ಎಲ್ಲಾ ಸಂಸ್ಥೆಗಳಿಂದ, ಮುಖ್ಯವಾಗಿ ಹೊಸ ವಿಶ್ವ ಪಂಥದ ಮೇಲೆ ನಿಯಂತ್ರಣವನ್ನು ಸೈತಾನನಿಂದ ಪಡೆದಿರುವ ಒಂದು ವಿಶ್ವ ಸರ್ಕಾರದಿಂದ ದೂರವಿರಲು ದೇವರು ನಮಗೆಲ್ಲರಿಗೂ ಹೇಳುತ್ತಾರೆ.[20] ನೀವು ದೇವರನ್ನು ನಂಬುವಿರಾ, ಅಥವಾ ಈ ಪೈಶಾಚಿಕ ವ್ಯಾಟಿಕನ್ ರೋಮನ್ ಕ್ಯಾಥೊಲಿಕ್ ಕುಪಂಥವನ್ನು ಮತ್ತು ಪೋಪ್ ಅವರನ್ನು ನಂಬುವಿರಾ? ಸೈತಾನನ ಪೋಪರನ್ನು ನಂಬುವುದರಲ್ಲಿ ಏನೂ ಲಾಭವಿಲ್ಲ. ಅವನನ್ನು ನಂಬಿದವರ ಮತ್ತು ಅನುಸರಿಸಿದವರ ಅಂತ್ಯವು ಬೆಂಕಿಯ ಕೆರೆಯಲ್ಲಿ ಶಾಶ್ವತತೆಯಾಗಿದೆ.

ಬೇರೆ ಯಾವುದೇ ಗ್ರಹದ ಮೇಲೆ ಜೀವವಿಲ್ಲ ಎಂದು ಸ್ಪಷ್ಟವಾಗಿ ಹೇಳುವ ದೇವರನ್ನು ನಂಬಿ. ಯುಎಫ್ಓ ಗಳು ಆಕಾಶದಿಂದ ಬಂದ ದೇವದೂತ-

*(ಪುಟ 8ರಲ್ಲಿ ಮುಂದುವರಿದಿದೆ)*

19 http://www.activistpost.com/2012/12/vatican-calls-for-world-government-and.html

20 2 ಕೊರಿಂಥದವರಿಗೆ 6:14-18, 2 ಥೆಸಲೋನಿಕದವರಿಗೆ 2:3-12, ಪ್ರಕಟನೆ 2:18-25, 14:8-11, 16:1-2, 10-11, ಅಧ್ಯಾಯ 17, 18:1-8, 19:1-3, 17-21, 20:4, 10

## ಸುಜೆಟ್ ಬ್ರೌನ್ ಅವರ ಪುರಾವೆ

ನನ್ನ ಹೆಸರು ಸುಜೆಟ್ ಬ್ರೌನ್ ಮತ್ತು ನಾನು ಸುಮಾರು ಐದು ವರ್ಷಗಳಿಂದ ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರಿಗಳ ಸದಸ್ಯಳಾಗಿದ್ದೇನೆ. ಇವು ನನ್ನ ಜೀವನದ ಅತ್ಯುತ್ತಮ ಐದು ವರ್ಷಗಳಾಗಿವೆ. ನನ್ನ ಪ್ಯಾಸ್ಟರ್, ಟೋನಿ ಅಲಾಮೊ, ಅವರ ಬೋಧನೆಗಳ ಮೂಲಕ ನಾನು ಪ್ರಾರ್ಥಿಸಲು ಮತ್ತು ಪ್ರಭುವನ್ನು ಗಳಿಸಲು, ಬೈಬಲ್ ಅನ್ನು ಶ್ರದ್ಧೆಯಿಂದ ಹೇಗೆ ಓದುವುದು ಮತ್ತು ಜನರಿಗೆ ಹೇಗೆ ಸಾಕ್ಷಿಯಾಗುವುದು ಎಂಬುದನ್ನು ಕಲಿತಿದ್ದೇನೆ. ನಾನು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರಿಗಳಿಗೆ ಬಹಳ ಕೃತಜ್ಞಳಾಗಿದ್ದೇನೆ, ಏಕೆಂದರೆ ನಾನು ರಕ್ಷಣೆ ಹೊಂದಿದ ನಂತರ, ನಾನು ಸಂಪೂರ್ಣ ಹೃದಯದಿಂದ ಪ್ರಭುವಿನ ಸೇವೆ ಮಾಡಲು ಮತ್ತು ನನ್ನ ಬದುಕನ್ನು ಸಮರ್ಪಿಸಲು ಬಯಸಿದೆನು, ಮತ್ತು ಆತನ ಕ್ರೈಸ್ತದೇವಾಲಯದ ಬಾಗಿಲುಗಳು ನನಗಾಗಿ ತೆರೆದಿದ್ದವು.

ನನ್ನನ್ನು ಬಹಳ ಚಿಕ್ಕಂದಿನಿಂದ ವಿವಿಧ ಕ್ರೈಸ್ತಮತೀಯ ಚರ್ಚುಗಳಲ್ಲಿ ಬೆಳೆಸಲಾಯಿತು. ನಾನು ಚಿಕ್ಕವಳಾಗಿದ್ದಾಗ ಸುವಾರ್ತಾ ಸಂಗೀತವೆಂದರೆ ಬಹಳ ಇಷ್ಟವಿತ್ತು. ನನ್ನ ಅಂಕಲ್ ಮೈಕ್ ಪ್ಯಾಸ್ಟರ್ ಆಗಿದ್ದರು ಮತ್ತು ನಾನು ಐದು ವರ್ಷದವಳಾಗಿದ್ದಾಗ, ನನಗೆ ನರಕದ ಬಗ್ಗೆ ಹೇಳಿದರು. ಬೆಂಕಿ ಮತ್ತು ಶಾಶ್ವತ ಯಾತನೆಗಳ ಬಗ್ಗೆ ಅವರು ನನಗೆ ಹೇಳಿದರು."ನಾನು ರಕ್ಷಣೆ ಹೊಂದುವುದು ಹೇಗೆ?" ಎಂದು ನಾನು ಅವರನ್ನು ಕೇಳಿದೆ. ಅವರು ನನ್ನೊಂದಿಗೆ ಪ್ರಾರ್ಥಿಸಿದರು. "ಪ್ರಭು, ನೀವು ನನ್ನ ಪಾಪಗಳಿಗಾಗಿ ಶಿಲುಬೆಯ ಮೇಲೆ ಮರಣ ಹೊಂದಿದಿರಿ ಮತ್ತು ಮೂರನೇ ದಿನದಂದು ಪುನಃ ಎದ್ದು ಬಂದಿರಿ ಎಂದು ನಾನು ನಂಬುತ್ತೇನೆ. ನನ್ನ ಹೃದಯದೊಳಗೆ ಬನ್ನಿ ಪ್ರಭು ಯೇಸು" ಎಂದು ಪ್ರಾರ್ಥಿಸುವುದು ನನಗೆ ನೆನಪಿದೆ. ನನ್ನ ಪಾಪಗಳನ್ನು ತೊಳೆಯಲು ಯೇಸುವಿನ ರಕ್ತದ ಶಕ್ತಿಯ ಬಗ್ಗೆ ಅಥವಾ ನಾನು ದೇವರ ದಶಾಜ್ಞೆಗಳನ್ನು ಪಾಲಿಸಬೇಕೆಂಬುದರ ಬಗ್ಗೆ ನನಗೆ ಏನನ್ನೂ ಹೇಳಿರಲಿಲ್ಲ. ನಾನು ರಕ್ಷಣೆ ಹೊಂದಿದ್ದೆ ಮತ್ತು ನಾನು ನನ್ನ ರಕ್ಷಣೆಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ ಎಂದು ನನ್ನ ಅಂಕಲ್ ನನಗೆ ಹೇಳಿದರು. "ಒಮ್ಮೆ ರಕ್ಷಣೆ ಹೊಂದಿದರೆ, ಸದಾ ರಕ್ಷಿತರು" ಎಂದು ಮತ್ತು ಯಾರೂ ಪರಿಪೂರ್ಣರಾಗಿರಲು ಸಾಧ್ಯವಿಲ್ಲ ಎಂದು ನಾನು ನಂಬಿದ್ದೆ. ಚರ್ಚುಗಳು ನನಗೆ ಇದನ್ನೇ ಹೇಳಿದ್ದವು. ರಕ್ಷಣೆ ಹೊಂದಲು ನಾನು ಪ್ರಾರ್ಥನೆ ಮಾಡಬೇಕು ಮತ್ತು ನನ್ನ ಪಾಪಗಳಿಗಾಗಿ ಯೇಸು ಶಿಲುಬೆಯ ಮೇಲೆ ಮರಣ ಹೊಂದಿದರು ಎಂದು ನಂಬಿದರೆ ಸಾಕು ಎಂದು ನಾನು ನಿಜವಾಗಿಯೂ ಅಂದುಕೊಂಡಿದ್ದೆ. ನಾನು 5 ವರ್ಷದವಳಾಗಿದ್ದಾಗಿನಿಂದ ನಾನು ರಕ್ಷಣೆ ಹೊಂದಿದ್ದೆ ಎಂದು ನಂಬಿದ್ದೆ.

ಹೈಸ್ಕೂಲ್ ನಲ್ಲಿ ನಾನು ಸೀನಿಯರ್ ಆಗಿದ್ದಾಗ, ನಾನು ದಕ್ಷಿಣ ಬ್ಯಾಪ್ಟಿಸ್ಟ್ ಚರ್ಚಿಗೆ ಹೋಗುತ್ತಿದ್ದೆ. ನನ್ನನ್ನು ಕ್ರೈಸ್ತಮತದಿಂದ ವಿಮುಖ ಮಾಡುವಂತಹ ಪಾಪಗಳನ್ನು ಪ್ಯಾಸ್ಟರ್ ಮತ್ತು ಕಾಯರ್ ನ ಮುಖ್ಯಸ್ಥರು ಮಾಡುತ್ತಿದ್ದರು. ನಾನು ಅವರಿಗಿಂತ ಉತ್ತಮಳಾಗಿದ್ದೆ ಎಂದಲ್ಲ, ನಾನೂ ಪಾಪಿಯಾಗಿದ್ದೆ. ನಾನು ಚರ್ಚಿಗೆ ಹೋಗುವುದನ್ನು ನಿಲ್ಲಿಸಿದೆನು.

ಹೈಸ್ಕೂಲ್ ನಲ್ಲಿ ನನ್ನ ಕೊನೆಯ ವರ್ಷದಲ್ಲಿ ನಾನು ಮೋಜು ಮಾಡಬೇಕು ಮತ್ತು ಕೂಲ್ ಆಗಿರಬೇಕೆಂದಿದ್ದೆ. ನಾನು ನೇರ ಎ ವಿದ್ಯಾರ್ಥಿನಿಯಾಗಿದ್ದೆ. ಹೈ ಸ್ಕೂಲ್ ನ ಕೊನೆಯ ವರ್ಷದಲ್ಲಿ ನಾನು ತಪ್ಪು ಗೆಳೆಯರೊಂದಿಗೆ ಸಮಯ ಕಳೆಯಲು ಆರಂಭಿಸಿದೆನು ಮತ್ತು ಮೀಥಾಂಫೆಟಾಮೈನ್ ವ್ಯಸನಿಯಾದೆ. ನಾನು ಅದನ್ನು ಪ್ರತಿ ದಿನ ಮಾಡಲು ಆರಂಭಿಸಿದೆನು. ನಾನು ಸುಳ್ಳು ಹೇಳುವುದನ್ನು, ಕದಿಯುವುದನ್ನು ಮತ್ತು ಮಾದಕ ದ್ರವ್ಯಗಳನ್ನು ಮಾರಾಟ ಮಾಡುವುದನ್ನು ಪ್ರಾರಂಭಿಸಿದೆನು. ನನ್ನ ಬದುಕು ಕೆಳಕ್ಕುರುಳಿತು. ನನಗೆ ಬಹಳ ಕಳೆದುಹೋದಂತಾಯಿತು ಮತ್ತು ಬಹಳ ಖಿನ್ನತೆಯುಂಟಾಯಿತು. ನನಗೆ ಬಹಳ ಖಾಲಿ ಮತ್ತು ಏಕಾಂಗಿ ಎಂದೆನಿಸಿತು. ಮಾದಕದ್ರವ್ಯ ವ್ಯಾಪಾರಿಯಾಗಿದ್ದ ನನ್ನ ಗೆಳೆಯನೊಂದಿಗಿರಲು ನಾನು ಮನೆ ಬಿಟ್ಟೆನು ಮತ್ತು ಬಹಳ ಅಸಮಾಧಾನವಾಯಿತು. ನಾನು ಕಾಲೇಜ್ ಬಿಟ್ಟೆ ಮತ್ತು ಕೆಲಸ ಮಾಡುವುದನ್ನು ನಿಲ್ಲಿಸಿದೆ ಮತ್ತು ಮಾದಕದ್ರವ್ಯದ ಬದುಕನ್ನು ಬದುಕಿದೆ. ನನ್ನ ಜೀವನದ ಎಂಟು ವರ್ಷಗಳ ಕಾಲ ನಾನು ಮೀಥಾಂಫೆಟಾಮೈನ್ ಬಳಸಿದೆ. ನಾನು ಯಾವುದೇ ವಸ್ತುವಿನ ವ್ಯಸನಿಯಾಗಬಾರದೆಂದಿದ್ದೆ, ಆದರೆ ಸೈತಾನನು ನನ್ನನ್ನು ಹಿಡಿತದಲ್ಲಿಟ್ಟುಕೊಂಡಿದ್ದನು ಮತ್ತು ನಿಲ್ಲಿಸಲು ನನಗೆ ಸಾಧ್ಯವಾಗಲಿಲ್ಲ.



*ಸಹೋದರಿ ಸುಜೆಟ್ ಬ್ರೌನ್*

ಸೆಪ್ಟೆಂಬರ್ 11ರ ಒಂದೆರಡು ವರ್ಷಗಳ ನಂತರ, ನಾನು "ಲೂಸ್ ಚೇಂಜ್" ನೋಡಿದೆ. ಟ್ವಿನ್ ಟವರ್ಸ್ ಕೆಳಗೆ ಬೀಳುವುದನ್ನು ನೋಡಿದೆ ಮತ್ತು ಅದೊಂದು ನಿಯಂತ್ರಿತ ಉರುಳಿಸುವಿಕೆಯಾಗಿತ್ತು ಎಂದು ನನಗೆ ತಿಳಿದಿತ್ತು. ಸೆಪ್ಟೆಂಬರ್ 11ರ ಬಗ್ಗೆ ಸಂಶೋಧನೆ ನಡೆಸಲು ಪ್ರಾರಂಭಿಸಿದೆ. ನನಗೆ ಸೆಪ್ಟೆಂಬರ್ 11ಕ್ಕೆ ಯಾರು ಜವಾಬ್ದಾರರು ಎಂಬ ಸತ್ಯ ತಿಳಿಯಬೇಕಿತ್ತು. ನಮ್ಮ ಸರ್ಕಾರವನ್ನು ನಾನು ನಂಬಲಿಲ್ಲ. ನಾನು ನಾಲ್ಕೈದು ವರ್ಷ ಸಂಶೋಧನೆ ನಡೆಸಿದೆ – ಸಂಶೋಧನೆಯ ಸಹಸ್ರಾರು ಗಂಟೆಗಳು. ಈ ಸಂಶೋಧನೆ ನನ್ನ

*(ಪುಟ 6ರಲ್ಲಿ ಮುಂದುವರಿದಿದೆ)*

# ಸುಜೆಟ್ ಬ್ರೌನ್ ಅವರ ಪುರಾವೆ

*(ಪುಟ 5 ರಿಂದ ಮುಂದುವರಿದಿದೆ)*

ಬದುಕಿನಿಂದ ಒಂದು ಪಾರಾಗುವಿಕೆಯಂತಿತ್ತು ಮತ್ತು ಒಂದು ಗೀಳಾಯಿತು. ನನ್ನ ಬದುಕಿನ ಈ ಸಮಯದಲ್ಲಿ, ನಾನು ಮೆತ್ ಸೇವಿಸಿ ಅಮಲೇರಿ ಸಂಶೋಧನೆ ನಡೆಸುತ್ತಿದ್ದೆ. ನಾನು ಓದುತ್ತಿದ್ದುದು ಒಂದು ಸುಳ್ಳು ಎಂದು ಒಂದು ದಿನ ನನಗೆ ತಿಳಿಯಿತು.

ನಾನು ನನ್ನ ಕಂಪ್ಯೂಟರ್ ಎದುರು ಕುಳಿತಿದ್ದೆ ಮತ್ತು "ಪ್ರಭು, ನನಗೆ ಸೆಪ್ಟೆಂಬರ್ 11ರ ಬಗ್ಗೆ ಸತ್ಯವನ್ನು ತೋರಿಸು; ಸತ್ಯವನ್ನು ತಿಳಿಯಬೇಕೆಂಬ ಹೊರೆ ನನಗೆ ಬಹಳ ಹೆಚ್ಚೆನಿಸುತ್ತಿದೆ. ನಾನು ಈ ಎಲ್ಲಾ ಸಂಶೋಧನೆಯನ್ನು ಮಾಡಿದ್ದೇನೆ. ನನಗೆ ಸತ್ಯವನ್ನು ತೋರಿಸು ಮತ್ತು ಸುಳ್ಳುಗಳನ್ನು ತೆಗೆದುಹಾಕು" ಎಂದು ಪ್ರಾರ್ಥಿಸಲು ಆರಂಭಿಸಿದೆ. ಪ್ರಭು ನನಗೆ ಕೂಡಲೆ ಉತ್ತರ ನೀಡಿದರು. ಜೆಸ್ಯೂಟ್ ಮತ್ತು ವ್ಯಾಟಿಕನ್ ಬಗ್ಗೆ ನಾನು ಮಾಹಿತಿ ಕಂಡುಹಿಡಿಯಲು ಆರಂಭಿಸಿದೆ. ಕ್ಯಾಥೊಲಿಕ್ ಚರ್ಚ್ ಬಗ್ಗೆ ನನಗೆ ಏನೂ ತಿಳಿದಿರಲಿಲ್ಲ. 1984ರಲ್ಲಿ ಆಲ್ಬರ್ಟೋ ರಿವೆರ (ಮಾಜಿ ಜೆಸ್ಯೂಟ್ ಪಾದ್ರಿ) ಟೋನಿ ಅಲಾಮೊ ಕ್ರಿಸ್ಚಿಯನ್ ಮಿನಿಸ್ಟ್ರಿಗಳಲ್ಲಿ ಮಾತನಾಡುವುದರ ವಿಡಿಯೊ ಒಂದನ್ನು ನಾನು ಆನ್ಲೈನ್ ನೋಡಿದೆ. ಹಳದಿ ಬಣ್ಣದ ಸ್ಟಿಕಿ ನೋಟ್ ಮೇಲೆ ಬರೆದಿಟ್ಟುಕೊಂಡೆ, "ಟೋನಿ ಅಲಾಮೊ ಕ್ರಿಸ್ಚಿಯನ್ ಮಿನಿಸ್ಟ್ರೀಸ್" ಮತ್ತು ಅದನ್ನು ಬದಿಗಿಟ್ಟೆ, ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರಿಗಳ ಬಗ್ಗೆ ಸಂಪೂರ್ಣವಾಗಿ ಮರೆತುಬಿಟ್ಟೆ.

ಜೆಸ್ಯೂಟರ ಮೇಲೆ ಮತ್ತು ವ್ಯಾಟಿಕನ್ ಮೇಲೆ ಸಂಶೋಧನೆಯನ್ನು ಮುಂದುವರಿಸಿದೆ. ಸಂಕಟದ ಮೊದಲು ಮೇಲಕ್ಕೆತ್ತಲ್ಪಡುವುದನ್ನು ನಾನು ನಂಬಿದ್ದೆ, ಆದ್ದರಿಂದ ಒಂದು-ವಿಶ್ವ ಸರ್ಕಾರ ಬಂದಾಗ ನಾನು ಇಲ್ಲಿರುವುದಿಲ್ಲ ಎಂದುಕೊಂಡೆ. ನಾವು ಕೊನೆಯ ದಿನಗಳಲ್ಲಿ ಜೀವಿಸುತ್ತಿದ್ದೇವೆ ಮತ್ತು ವ್ಯಾಟಿಕನ್ ಎಲ್ಲಾ ಅಸಹ್ಯ ವಸ್ತುಗಳ ತಾಯಿ ಎಂಬ ಬಗ್ಗೆ ನನ್ನ ಗ್ರಹಿಕೆಯನ್ನು ದೇವರು ತೆರೆಯಲಾರಂಭಿಸಿದರು. ನಾನು ಅದನ್ನು ನಂಬಲು ಸಿದ್ಧನಿರಲಿಲ್ಲ.

ಸುಮಾರು ಇದೇ ಹೊತ್ತಿಗೆ, ಒಂದು ದಿನ ನನ್ನ ಗೆಳೆಯ ನನ್ನ ಬಳಿ ಬಂದು ಮೇಲಕ್ಕೆತ್ತಲ್ಪಡುವುದು ನಿಜವಲ್ಲ ಎಂದು ಹೇಳಿದನು. ನನಗೆ ಕೋಪ ಬಂತು, ಆದರೆ ನನಗೆ ಬೈಬಲ್ ತಿಳಿದಿರಲಿಲ್ಲ ಮತ್ತು ನನ್ನ ನಂಬಿಕೆಗಳ ಪುರಾವೆಯಾಗಿ ನಾನು ಅವನಿಗೆ ಬೈಬಲ್ ನಿಂದಏನನ್ನೂ ಹೇಳಲು ಸಾಧ್ಯವಿರಲಿಲ್ಲ. ಆದ್ದರಿಂದ, ಅವನು ಹೇಳಿದ್ದು ತಪ್ಪು ಎಂದು ರುಜುವಾತುಪಡಿಸಲು ನಾನು ಬೈಬಲ್ ಓದುವುದನ್ನು ಪ್ರಾರಂಭಿಸಿದೆನು. ನನ್ನ ನಂಬಿಕೆಗಳನ್ನು ದೃಢಪಡಿಸಲು ನನಗೆ ಬೈಬಲ್ ನಲ್ಲಿ ಏನೂ ಸಿಕ್ಕಲಿಲ್ಲ.

ನಾನು ಮತ್ತಾಯ ಅಧ್ಯಾಯ 24 ಶ್ಲೋಕ 29-30 ಓದಿದೆ: "ಆ ದಿನಗಳ ಸಂಕಟವು ತೀರಿದ ಕೂಡಲೆ ಸೂರ್ಯನು ಕತ್ತಲಾಗಿಹೋಗುವನು, ಚಂದ್ರನು ಬೆಳಕು ಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, ಆಕಾಶದ ಶಕ್ತಿಗಳು ಕದಲುವವು. ಆಗ ಮನುಷ್ಯಕುಮಾರನನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣಬರುವುದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಿದುಕೊಳ್ಳುವರು, ಮತ್ತು ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು. ಪ್ರಭುವು ಸಂಕಟದ ನಂತರ ಬರುವರು, ಅದರ ಮೊದಲಲ್ಲ!" ಎಂದು ಅಂದುಕೊಂಡೆ. ಅಲ್ಲದೆ ನಾನು ಧರ್ಮಗ್ರಂಥಗಳನ್ನು ಓದುತ್ತಲೇ ಇದ್ದೆ ಮತ್ತು ಅವುಗಳಲ್ಲಿ ಆತ ತನ್ನ ಶಿಷ್ಯರಿಗೆ "ಎಚ್ಚರವಾಗಿರಿ" ಮತ್ತು "ಸಿದ್ಧರಾಗಿರಿ," "ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲ" ಎಂದು ಹೇಳುತ್ತಿದ್ದರು. "ನಾವು ನಮ್ಮ ರಕ್ಷಣೆಯನ್ನು ಕಳೆದುಕೊಳ್ಳಲು ಸಾಧ್ಯವಿಲ್ಲವಾದರೆ ನೀವು ನಿಮ್ಮ ಶಿಷ್ಯರಿಗೆ ಎಚ್ಚರವಾಗಿರಲು, ಸಿದ್ಧರಾಗಿರಲು ಏಕೆ ಹೇಳುತ್ತಿದ್ದೀರಿ?ನಾವು ಯಾವುದಕ್ಕಾಗಿ ಎಚ್ಚರವಾಗಿರಬೇಕು?" ಎಂದು ನಾನು ಪ್ರಭುವನ್ನು ಕೇಳಿದೆನು. ಪ್ರಭುವು ನನ್ನ ಹೃದಯದೊಂದಿಗೆ ಮಾತನಾಡಿ, "ಏಕೆಂದರೆ ನೀವು ನಿಮ್ಮ ರಕ್ಷಣೆಯನ್ನು ಕಳೆದುಕೊಳ್ಳಬಹುದು" ಎಂದು ನನಗೆ ಹೇಳಿದರು. ನನಗೆ ಚರ್ಚುಗಳ ಮೇಲೆ ಬಹಳ ಕೋಪ ಬಂದಿತು. ನನಗೆ ಸುಳ್ಳು ಹೇಳಲಾಗಿತ್ತು ಮತ್ತು ನನ್ನನ್ನು ಮೋಸಗೊಳಿಸಲಾಗಿತ್ತು. ನಾನು ಚರ್ಚಿನ ಹಿಂದಿರುಗಲು ಸಿದ್ಧಳಿರಲಿಲ್ಲ.

ಈ ಸಮಯದಲ್ಲಿ, ನಾನು ನನ್ನ ಪಾಪಗಳಲ್ಲಿ ಇನ್ನೂ ಕಳೆದುಹೋಗಿದ್ದೆ ಮತ್ತು ಸತ್ತುಹೋಗಿದ್ದೆ, ಮೆತ್ ವ್ಯಸನಿಯಾಗಿದ್ದೆ. ನಾನು ಜೆಸ್ಯೂಟರ ಮೇಲೆ ಸಂಶೋಧನೆಯನ್ನು ನಿಲ್ಲಿಸಿದೆ, ಏಕೆಂದರೆ ನನಗೆ ಭಯವಾಯಿತು. ನಾನು ಅದನ್ನು ನನ್ನ ಮನಸ್ಸಿನಿಂದ ಹೊರಹಾಕಬೇಕೆಂದಿದ್ದೆನು. ಒಂದು ದಿನ ನಾನು ನನ್ನ ಲಿವಿಂಗ್ ರೂಮಿನಲ್ಲಿ ಅಮಲಿನಲ್ಲಿದ್ದೆ ಮತ್ತು ಈ ಅಗಾಧವಾದ ಮನವರಿಕೆ ನನಗಾಯಿತು. ನನಗೆ ಪ್ರಭುವಿನ ಉಪಸ್ಥಿತಿಯ ಅನುಭವವಾಯಿತು. ನಾನು ಹತೋಟಿಯಿಲ್ಲದೆ ಅಳಲು ಪ್ರಾರಂಭಿಸಿದೆ. ನಾನು ನನ್ನ ಮೊಣಕಾಲುಗಳ ಮೇಲೆ ಬಿದ್ದು ನನ್ನ ಸಂಪೂರ್ಣ ಹೃದಯದಿಂದ ಪ್ರಭುವಿಗೆ ಕೂಗಿಹೇಳಿದೆ,

## ಜರ್ಮನಿ

ಪ್ರೀತಿಯ ಪ್ಯಾಸ್ಟರ್ ಅಲಾಮೊ,

ಪ್ರಭುವಿನ ಹೆಸರಿನಲ್ಲಿ ನಮಸ್ಕಾರಗಳು. ನಿಮ್ಮ ವೆಬ್ಸೈಟ್ ಓದಿ ನಾನು ಬಹಳ ಅನುಗ್ರಹಿತನಾದೆನು. ನೀವು ನಿಮ್ಮ ಸಾಹಿತ್ಯದಲ್ಲಿ ಕೆಲವನ್ನು ಇಂಗ್ಲಿಷ್ ಮತ್ತು ಜರ್ಮನ್, ಎರಡರಲ್ಲೂ, ಕಳುಹಿಸಬಹುದೇ ಎಂದು ಕೇಳಬೇಕೆಂದಿದ್ದೆ.100 ಜನರಿಗಾಗಿ ಸಾಮಗ್ರಿಯನ್ನು ನೀವು ಕಳುಹಿಸಿದರೆ ಚೆನ್ನಾಗಿರುತ್ತಿತ್ತು, ಏಕೆಂದರೆ ನನ್ನ ಚರ್ಚಿನಲ್ಲಿ ಪ್ರತಿಯೊಬ್ಬರೂ ಮೆಸ್ಸೆಅ ಪುಸ್ತಕವನ್ನು ಹೊಂದಿರಬೇಕೆಂದು ನಾನು ಬಯಸುತ್ತೇನೆ. ನೀವು ದಯವಿಟ್ಟು ಜರ್ಮನ್ ನಲ್ಲಿ 50 ಮತ್ತು ಇಂಗ್ಲಿಷ್ ನಲ್ಲಿ 50 ಕಳುಹಿಸಬಹುದೆ? ಅಲ್ಲದೆ, ನಮಗೆ 10 ಬೈಬಲ್ ಗಳು ಇಂಗ್ಲಿಷಿನಲ್ಲಾಗಲಿ ಅಥವಾ ಜರ್ಮನ್ ನಲ್ಲಾಗಲಿ ಬೇಕಾಗಿವೆ ಮತ್ತು 1,000 ಜನರಿಗಾಗಿ ಹಸ್ತಪತ್ರಿಕೆಗಳು ಬೇಕಾಗಿವೆ ಏಕೆಂದರೆ ನಾವು ಪ್ರಭಾವ ಬೀರಬೇಕೆಂದಿದ್ದೇವೆ! ಕಳೆದುಹೋದವರಿಗೆ ದೇವರ ಪದದೊಂದಿಗೆ ಕೈಚಾಚಲು ನೀವು ನಮಗೆ ನೆರವು ನೀಡುವುದಕ್ಕಾಗಿ ದೇವರು ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲಿ! ನಿಮ್ಮಿಂದ ಬೇಗನೆ ಉತ್ತರ ಪಡೆಯುವ ನಿರೀಕ್ಷೆಯಲ್ಲಿ!

ಕ್ರಿಸ್ತರಲ್ಲಿ ನಿಮ್ಮ,
ಆಂಡ್ರೆ ಜೆ. ಶೋನ್ — ಕೊಲೋನ್, ಜರ್ಮನಿ

## ದಕ್ಷಿಣ ಆಫ್ರಿಕ

ಯಾಕೋಬನ ದೇವರು ಮತ್ತು ನಮ್ಮ ಜೀವಂತ ಪವಿತ್ರ ದೇವರಾದ ಆತ ಎಷ್ಟು ಅದ್ಭುತ! ನಾನು ಯಾವಾಗಲೂ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ, ಏಕೆಂದರೆ ನಿಮ್ಮ ಮಿನಿಸ್ಟ್ರಿ ನಿಜವಾಗಿಯೂ ಜನರನ್ನು ದೇವರ ಬಳಿ ಕರೆತರುತ್ತಿದೆ, ಮತ್ತು ಅವರು ಸಂಪೂರ್ಣ ಹೃದಯ, ಮನಸ್ಸು, ಆತ್ಮ ಮತ್ತು ಶಕ್ತಿಯಿಂದ ದೇವರ ಸೇವೆ ಮಾಡಲು ಪ್ರಾರಂಭಿಸುತ್ತಾರೆ. ಧನ್ಯವಾದಗಳು, ಪ್ಯಾಸ್ಟರ್ ಟೋನಿ ಅಲಾಮೊ. ದೇವರ ಅನುಗ್ರಹ ಮತ್ತು ಕರುಣೆ ನಿಮ್ಮೊಂದಿಗೆ ಮತ್ತು ನಿಮ್ಮ ಮಿನಿಸ್ಟ್ರಿಯೊಂದಿಗೆ ಇರಲಿ.

ಗಿಫ್ಟ್ ಲಿಂಬನ್ ನಂಗ್ವಾಲೆ
ಜೊಹ್ಯಾನ್ಸ್ ಬರ್ಗ್, ದಕ್ಷಿಣ ಆಫ್ರಿಕಾ ಗಣರಾಜ್ಯ

## ಉಗಾಂಡಾ

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ನಮ್ಮ ಯೇಸು ಕ್ರಿಸ್ತರ ಹೆಸರಿನಲ್ಲಿ ನಿಮಗೆ ನಮಸ್ಕಾರಗಳು. ನಾನು ಪ್ಯಾಸ್ಟರ್ ಎಂಬ್ವಾಟಾ ಯಮುಂಗು, ಉಗಾಂಡಾದ ಕಂಪಾಲಾದಲ್ಲಿ ನಿಮ್ಮ ಸಾಹಿತ್ಯದ ವಿತರಕನಾಗಿದ್ದೇನೆ.

ನಿಮ್ಮ ಸಾಹಿತ್ಯದ ಮೂಲಕ ದೇವರು ಮಾಡಿದ ಕೆಲಸಕ್ಕಾಗಿ ನಾನು ಆತನಿಗೆ ಧನ್ಯವಾದ ಸಲ್ಲಿಸಲು ಇಚ್ಛಿಸುತ್ತೇನೆ. ನಾನು ನಿಮ್ಮ ಸಾಹಿತ್ಯವನ್ನು ಸಿಟಿ ಸೆಂಟರ್ ಕಾಲೇಜ್ ಸ್ಕೂಲ್ ಮತ್ತು ನಾಕಿವುಬೊ ಪ್ರಾಥಮಿಕ ಶಾಲೆಗಳಲ್ಲಿ ಹಂಚಿದೆನು. 30ಕ್ಕೂ ಹೆಚ್ಚು ಮಕ್ಕಳು ರಕ್ಷಣೆ ಹೊಂದಿದರು. ಕಾಂಗೊದ ಪ್ರಜಾತಾಂತ್ರಿಕ ಗಣರಾಜ್ಯದಲ್ಲಿ, 15 ಜನರು ರಕ್ಷಣೆ ಹೊಂದಿದರು.

ನನಗೆ ಸಾಹಿತ್ಯದೊಂದಿಗೆ 20 ಇಂಗ್ಲಿಷ್ ಬೈಬಲ್ ಗಳನ್ನು, 20 ಫ್ರೆಂಚ್ ಬೈಬಲ್ ಗಳನ್ನು, 20 ಫ್ರೆಂಚ್ ಮೆಸ್ಸೆಅ ಪುಸ್ತಕಗಳನ್ನು, 25 ಟಿ-ಷರ್ಟ್ ಗಳನ್ನು ಉಗಾಂಡಾ ಮತ್ತು ಕಾಂಗೊದಲ್ಲಿರುವ ತಂಡಕ್ಕೆ ಕಳುಹಿಸಲು ನಿಮ್ಮನ್ನು ಕೋರುತ್ತೇನೆ. ಆ ಬೈಬಲ್ ಗಳನ್ನು ಆ ಹೊಸದಾಗಿ ಮತಾಂತರಗೊಂಡವರಿಗೆ, ಪರಮಪ್ರಿಯರಿಗೆ ಹಂಚಲಾಗುತ್ತದೆ.

ಕ್ರಿಸ್ತರಲ್ಲಿ ನಿಮ್ಮ,
ಪ್ಯಾಸ್ಟರ್ ಎಂಬ್ವಾಟಾ ಯಮುಂಗು
ಕಂಪಾಲಾ, ಉಗಾಂಡಾ

“ಪ್ರಭು, ನಾನು ನಿಮ್ಮನ್ನು ಪ್ರೀತಿಸುತ್ತೇನೆ ಎಂದು ಹೇಳುತ್ತಾ ಪಾಪ ಮಾಡುವುದನ್ನು ಮುಂದುವರಿಸಲು ಹೇಗೆ ಸಾಧ್ಯ, ಮತ್ತು ನಾನು ನನ್ನನ್ನು ಕ್ರೈಸ್ತಮತೀಯಳೆಂದು ಹೇಳಿಕೊಳ್ಳುತ್ತಾ ಪಾಪ ಮಾಡುವುದನ್ನು ಮುಂದುವರಿಸಲು ಹೇಗೆ ಸಾಧ್ಯ?” ನನ್ನ ಹೃದಯ ಚೂರುಚೂರಾಯಿತು. ನನಗೆ ಬಹಳ ನಾಚಿಕೆಯಾಯಿತು, ಬಹಳ ಒಡೆದುಹೋದೆನು, ಮತ್ತು ಬಹಳ ಕೊಳಕೆನಿಸಿತು. ನಾನು ರಕ್ಷಣೆ ಹೊಂದಿಲ್ಲ ಮತ್ತು ನರಕದ ದಾರಿಯಲ್ಲಿದ್ದೆ ಎಂದು ಪ್ರಭುವು ನನಗೆ ತೋರಿಸಿದರು. ಆತನೊಂದಿಗೆ ಸರಿಯಾಗಲು, ಎಲ್ಲಿಗಾದರೂ ಹೋಗಲು ಯಾವುದಾದರೂ ಮಾರ್ಗವನ್ನು ತೋರಿಸಲು ನಾನು ಪ್ರಭುವನ್ನು ಕೇಳಿದೆನು. ಎಲ್ಲಾ ಚರ್ಚುಗಳು ನನಗೆ ಸುಳ್ಳು ಹೇಳಿದವು ಮತ್ತು ನಾನು ಹೋಗಬಹುದಾದ ಯಾವುದಾದರೊಂದು ಜಾಗ ಇರಲೇಬೇಕು ಎಂದು ನಾನು ಪ್ರಭುವಿಗೆ ಹೇಳಿದೆನು. ನಾನು ನರಕಕ್ಕೆ ಹೋಗಲು ಸಿದ್ಧವಿರಲಿಲ್ಲ, ನಾನು ಇನ್ನು ಮಾದಕದ್ರವ್ಯಗಳನ್ನು ಸೇವಿಸಲು ಸಿದ್ಧಳಿರಲಿಲ್ಲ, ಆದರೆ ನಿಲ್ಲಿಸಲು ನನಗೆ ಸಾಧ್ಯವಾಗುತ್ತಿರಲಿಲ್ಲ. ನಾನು ಇನ್ನು ಪಾಪ ಮಾಡಲು ಸಿದ್ಧಳಿರಲಿಲ್ಲ, ಆದರೆ ನಿಲ್ಲಿಸಲು ನನಗೆ ಸಾಧ್ಯವಾಗುತ್ತಿರಲಿಲ್ಲ.

ಹಲವು ತಿಂಗಳ ಹಿಂದೆ ನಾನು ಬರೆದಿದ್ದ ಹಳದಿ ಸ್ಟಿಕಿ ನೋಟ್ ನನಗೆ ಸಿಕ್ಕಿತು, “ಟೋನಿ ಅಲಾಮೊ ಕ್ರಿಸ್ಟಿಯನ್ ಮಿನಿಸ್ಟ್ರೀಸ್.” ನಾನು ಆನ್‌ಲೈನ್ ಗೆ ಹೋಗಿ ಸುವಾರ್ತಾ ಸಾಹಿತ್ಯವನ್ನು ಓದಲು ಆರಂಭಿಸಿದೆ. ನನಗೆ ಇನ್ನೂ ಬೇಕೆನಿಸಿತು. ಸಾಹಿತ್ಯವು ಪವಿತ್ರಾತ್ಮದಿಂದ ತುಂಬಿಕೊಂಡಿತ್ತು ಮತ್ತು ನನ್ನ ಒಡೆದುಹೋಗಿದ್ದ ಆತ್ಮಕ್ಕೆ ಗುಣಪಡಿಸುವ ನೀರಿನಂತಿತ್ತು. ಹಗಲು ರಾತ್ರಿ ನಾನು ಆ ಸಾಹಿತ್ಯವನ್ನು ಓದಿದೆನು. ಅದು ಶಕ್ತಿಶಾಲಿಯಾಗಿತ್ತು. ನಾನು “ಪೋಪ್ ಅವರ ರಹಸ್ಯಗಳು,” “ಒಂದು-ವಿಶ್ವ ಸರ್ಕಾರದ ದುಷ್ಟ ಏಜೆಂಟರು ಯುನೈಟೆಡ್ ಸ್ಟೇಟ್ಸ್ ಏಜೆಂಟರ ವೇಷಧರಿಸಿರುವುದು,” ಮತ್ತು “ಮತ್ತೊಂದು ಪರ್ಲ್ ಹಾರ್ಬರ್” ಓದಿದೆನು ಮತ್ತು ನಮ್ಮ ಪ್ಯಾಸ್ಟರ್ ಗೆ ಸತ್ಯ ತಿಳಿದಿದೆ ಎಂದು ನನಗೆ ತಿಳಿಯಿತು.

ಒಂದು ಶನಿವಾರ ರಾತ್ರಿ ನನ್ನನ್ನು ಸ್ಯಾನ್ ಫ್ರ್ಯಾನ್ಸಿಸ್ಕೊ ಬೇ ಪ್ರದೇಶದಿಂದ ಕರೆದುಕೊಂಡು ಹೋಗಲು ನನ್ನ ಗೆಳೆಯನಿಗೆ ಹೇಳಿದೆನು. ರವಿವಾರದಂದು ಎರಡು ಆರಾಧನೆಗಳಿಗೆ ಬಂದೆನು. ನನಗೆ ಪವಿತ್ರಾತ್ಮದ ಅನುಭವವಾಯಿತು. ನಾನು ಇಲ್ಲಿರಬೇಕೆಂದು ಪ್ರಭು ಅಪೇಕ್ಷಿಸುತ್ತಾರೆ ಎಂದು ನನಗೆ ತಿಳಿದಿತ್ತು, ಆದರೆ ನಾನು ಸಿದ್ಧವಾಗಿರಲಿಲ್ಲ. ನಾನು ಮನೆಗೆ ಹೋದೆನು ಮತ್ತು ಪ್ರಭುವು ನನ್ನನ್ನು ಮೂರು ವಾರಗಳ ವರೆಗೆ ನಿಭಾಯಿಸಿದರು. ನಾನು ಮಾದಕದ್ರವ್ಯಗಳನ್ನು ಮತ್ತು ನನ್ನ ಗೆಳೆಯನನ್ನು ಹಿಡಿದಿಟ್ಟುಕೊಂಡಿದ್ದೆನು. ಒಂದು ದಿನ ನಾನು “ದ ರೋಡ್ ಟು ಪವರ್” ಎಂಬ ಹೆಸರಿನ ಸಾಹಿತ್ಯವನ್ನು ಓದುತ್ತಿದ್ದೆ ಮತ್ತು ಮಂಡಿಯೂರಲು ನಂಬಿಕೆಯನ್ನು ಪಡೆದೆನು. ನಾನು ಮಾದಕದ್ರವ್ಯಗಳಿಗೆ ಹಿಂದಿರುಗುತ್ತೇನೆ, ಎಂದು ಸೈತಾನನು ನನಗೆ ಹೇಳುತ್ತಿದ್ದನು ಆದ್ದರಿಂದ ನಾನು ಪಾಪಿಯ ಪ್ರಾರ್ಥನೆಯನ್ನು ಹೇಳಲು ಸಿದ್ಧವಿರಲಿಲ್ಲ. ಆದರೆ ಈ ಬಾರಿ ಸಂಕೋಲೆಗಳು ಒಡೆದುಹೋದವು. ಪ್ರಭುವು ನನ್ನನ್ನು ನನ್ನ ಪಾಪಗಳಿಂದ ಮತ್ತು ಮಾದಕದ್ರವ್ಯ ವ್ಯಸನದಿಂದ ಮುಕ್ತಗೊಳಿಸುತ್ತಾರೆ ಎಂದು ಹೃತ್ಪೂರ್ವಕವಾಗಿ ನಂಬಿದೆನು.


ಸಹೋದರ ಜೋಸೆಫ್ ಬಾಂಡಾ ಪ್ಯಾಸ್ಟರ್ ಅಲಾಮೊ ಅವರ ಆತ್ಮ-ಗೆಲ್ಲುವ ಸಾಹಿತ್ಯವನ್ನು ಚಿಪಾಟಾ ಪಟ್ಟಣ ಕೇಂದ್ರದಲ್ಲಿ ಹಂಚುತ್ತಿರುವುದು-ಚಿಪಾಟಾ, ಜಾಂಬಿಯಾ

ಸಂಪೂರ್ಣ ಹೃದಯದಿಂದ ಪಾಪಿಯ ಪ್ರಾರ್ಥನೆಯನ್ನು ಹೇಳಿದೆನು, ಮತ್ತು ಮನಸ್ಸಿನಲ್ಲಿ, “ನಾನು ಸಂಪೂರ್ಣ ಹೃದಯದಿಂದ ಪ್ರಭುವಿನ ಸೇವೆ ಮಾಡಲಿದ್ದೇನೆ ಮತ್ತು ಪಾಪದ ಬದುಕಿಗೆ ಎಂದೂ ಹಿಂದಿರುಗುವುದಿಲ್ಲ” ಎಂದು ನಿರ್ಧರಿಸಿದೆನು. ಒಂದು ಹೋಟೆಲ್ ಕೊಠಡಿಯಲ್ಲಿ ನಾನು ನನ್ನ ಮಂಡಿಯೂರಿದ್ದೆನು. ಯೇಸು ಕ್ರಿಸ್ತರು ನನ್ನನ್ನು ಬಿಡುಗಡೆಗೊಳಿಸಿದರು. ನಾನು ರಕ್ಷಣೆ ಹೊಂದಿದೆನು ಎಂದು ನನಗೆ ತಿಳಿದಿತ್ತು. ಆತನ ಪವಿತ್ರಾತ್ಮ ನನ್ನೊಳಗೆ ಬರುವ ಮತ್ತು ಆತನ ರಕ್ತ ನನ್ನ ಪಾಪಗಳನ್ನು ತೊಳೆಯುವ ಅನುಭವ ನನಗಾಯಿತು. ನನಗೆ ಬಹಳ ಸಂತೋಷವಾಯಿತು. ನಾನು ಸಂತೋಷದ ಕಣ್ಣೀರು ಸುರಿಸುತ್ತಿದ್ದೆನು. ನಾನು ಓಡಿಹೋಗಿ ನನ್ನೊಂದಿಗೆ ಆಗಷ್ಟೇ ಆದುದನ್ನು ಎಲ್ಲರಿಗೆ ಹೇಳಬೇಕೆಂದೆನಿಸಿತು. ಮಾದಕದ್ರವ್ಯ ಸೇವನೆ ಅಥವಾ ಪಾಪ ಮಾಡಲು ನನ್ನಲ್ಲಿ ಯಾವುದೇ ಇಚ್ಛೆ ಇರಲಿಲ್ಲ. ಕೇವಲ ಬೈಬಲ್‌ಅನ್ನು ಓದುವುದು ಮತ್ತು ಪ್ರಭುವಿನ ಸೇವೆ ಮಾಡುವುದು ನನ್ನ ಇಚ್ಛೆಯಾಗಿತ್ತು.

ಜನವರಿ11, 2008ರಲ್ಲಿ ನಾನು ರಕ್ಷಣೆ ಹೊಂದಿದ ಎರಡು ದಿನಗಳ ನಂತರ ಈ ಮಿನಿಸ್ಟ್ರಿಯನ್ನು ಸೇರಿಕೊಂಡೆ. ಎರಡು ಸೂಟ್ ಕೇಸ್ ಗಳನ್ನುಪ್ಯಾಕ್ ಮಾಡಿ ರೈಲು ಹತ್ತಿ ಇಲ್ಲಿಗೆ ಬಂದೆನು. ನಾನು ಹಿಂದೆಂದೂ ಇಷ್ಟು ಸಂತೋಷವಾಗಿರಲಿಲ್ಲ. ನಾನೀಗ ಮಾದಕದ್ರವ್ಯ-ಮುಕ್ತಳಾಗಿದ್ದೇನೆ. ನಾನು ಪವಿತ್ರಾತ್ಮದ ಪವಿತ್ರಸ್ನಾನವನ್ನು ಪಡೆದೆನು ಮತ್ತು ನನ್ನ ಉಳಿದ ಜೀವನದಲ್ಲೂ ನಾನು ಇದನ್ನೇ ಮಾಡಬೇಕೆಂದಿದ್ದೇನೆ, ಪ್ರಭುವಿಗೆ ಹಿಂದಕ್ಕೆ ನೀಡುವುದು ಏಕೆಂದರೆ ಆತ ಕ್ಯಾಲ್ವಾರಿಯಲ್ಲಿ ನನಗಾಗಿ ತನ್ನ ಜೀವ ಕೊಟ್ಟನು. ಪ್ರಭು ನಿಮಗೆ ನಿಜವಾಗಿ ರಕ್ಷಣೆ ನೀಡಬಹುದು ಮತ್ತು ಪಾಪವನ್ನು ಜಯಿಸಲು ನಿಮಗೆ ಶಕ್ತಿ ನೀಡಬಹುದು. ಆತ ಅದನ್ನು ನನಗಾಗಿ ಮಾಡಿದರು ಮತ್ತು ಪ್ರಾಮಾಣಿಕವಾದ, ಪಶ್ಚಾತ್ತಾಪಪಡುವ ಹೃದಯದಿಂದ ಆತನನ್ನು ಕರೆಯುವ ಯಾರಿಗೇ ಆಗಲಿ ಆತ ಅದನ್ನು ಮಾಡಬಹುದು.

## ಫ್ಲಾರಿಡಾ

ನಿಮಗೆ ಬಹಳ ಧನ್ಯವಾದಗಳು! ನಾನು ಅವರ ಸಂದೇಶಗಳಲ್ಲಿ ಹಲವಾರು ಸಂದೇಶಗಳನ್ನು ಕೇಳಲು

ಡೌನ್ಲೋಡ್ ಮಾಡಿ ಸಿಡಿಗಳಲ್ಲಿ ಹಾಕಿದ್ದೇನೆಂದು ಪ್ಯಾಸ್ಟರ್ ಅಲಾಮೊ ಅವರಿಗೆ ತಿಳಿಸಿ. ಅವು ಮಾತುಕತೆಯ ರೇಡಿಯೊದಿಂದ ನನ್ನನ್ನು ದೂರ ಮಾಡುತ್ತಿವೆ (ನಾನು 2003ರಲ್ಲಿ ಆಗಲೆ ಟಿವಿ ಬಿಟ್ಟುಬಿಟ್ಟಿದ್ದೇನೆ). ನಾನು ಸದಾಕಾಲ ಪ್ಯಾಸ್ಟರ್ ಅಲಾಮೊ ಅವರ ಸಂದೇಶಗಳನ್ನು ಕೇಳುತ್ತಿದ್ದೇನೆ, ಮತ್ತು ದೇವರ ವಾಕ್ಯದ ಬಗ್ಗೆ ಬಹಳಷ್ಟು ಕಲಿಯುತ್ತಿದ್ದೇನೆ. ಅವು ನನ್ನನ್ನು ಬಹಳ ಅನುಗ್ರಹಿಸಿವೆ!
ಯೆಹೋಶುವನಲ್ಲಿ ಪ್ರೀತಿಯೊಂದಿಗೆ,
ಹ್ಯಾಂಕ್ ಕ್ರಿಸ್ಟೆನ್
ಸೇಂಟ್ ಪೀಟರ್ಸ್ಬರ್ಗ್, ಫ್ಲಾರಿಡಾ

## ಫಿಲಿಪೀನ್ಸ್

ಪ್ರಿಯ ಸುವಾರ್ತಾಬೋಧಕರಾದ ಟೋನಿ ಅಲಾಮೊ,

ನಾನು ಇಂಗ್ಲಿಷ್ ಬರೆಯುವುದರಲ್ಲಿ ಮತ್ತು ಮಾತನಾಡುವುದರಲ್ಲಿ ಅಷ್ಟು ನಿಪುಣೆಯಲ್ಲದ ಕಾರಣ ನನ್ನ ತಂಗಿಯಂತಿರುವ ನನ್ನ ಮಾಲೀಕರ ಮಗಳ ನೆರವಿನಿಂದ ನಾನು ಇದನ್ನು ಬರೆಯುತ್ತಿದ್ದೇನೆ. ನಾನು ಹತ್ತೊಂಬತ್ತು ವರ್ಷದವಳು; ಫಿಲಿಪೀನ್ಸ್ ನ ಪ್ರದೇಶಗಳಲ್ಲಿ ಒಂದಾದ ಆಂಟೀಕ್ ಎಂಬಲ್ಲಿಂದ ಹೈ ಸ್ಕೂಲ್ ಪದವೀಧರಳಾಗಿದ್ದೇನೆ ಮತ್ತು ಒಂದು ವರ್ಷಕ್ಕಿಂತ ಹೆಚ್ಚು ಸಮಯದಿಂದ ಈ ಒಳ್ಳೆಯ ಕುಟುಂಬಕ್ಕೆ ಮನೆಗೆಲಸದವಳಾಗಿ ಉದ್ಯೋಗದಲ್ಲಿದ್ದೇನೆ.

ಈ ಕುಟುಂಬವು ಪ್ರತಿ ರವಿವಾರ ನಿಮ್ಮ ರೇಡಿಯೊ ಕಾರ್ಯಕ್ರಮ “ಟೋನಿ ಅಲಾಮೊ ಮಿನಿಸ್ಟ್ರೀಸ್”ಅನ್ನು ಕೇಳುತ್ತದೆ ಮತ್ತು ಅದನ್ನು ಕೇಳಲು ನನ್ನನ್ನೂ ಪ್ರೋತ್ಸಾಹಿಸಿದವರು ಅವರೇ. ಕೆಲವೊಮ್ಮೆ ಪದಗಳ ಕಾರಣ ನನಗೆ ಅರ್ಥವಾಗುತ್ತಿರಲಿಲ್ಲ, ಆದರೆ ನಿಮ್ಮ ಕಾರ್ಯಕ್ರಮದಲ್ಲಿ ಏನು ಹೇಳಲಾಗುತ್ತಿದೆ ಎಂದು ಅವರು ವಿವರಿಸಿ ನನಗೆ ನೆರವಾಗುತ್ತಾರೆ, ಮತ್ತು ಒಮ್ಮೆ ನನಗೆ ಅದು ಅರ್ಥವಾದ ಮೇಲೆ, ನಾನು ಆ ಸಂದೇಶದ ಮೇಲೆ ಧ್ಯಾನ ಮಾಡುತ್ತೇನೆ ಮತ್ತು ಅದನ್ನು ಇನ್ನೂ ಹೆಚ್ಚು ಮೆಚ್ಚುತ್ತೇನೆ.

ನಿಮ್ಮ ಕಾರ್ಯಕ್ರಮದ ಮೂಲಕ ನೀವು ದೇವರ ಪ್ರೀತಿಯನ್ನು ಹರಡುವುದನ್ನು ಮುಂದುವರಿಸುತ್ತೀರಿ ಎಂದು ನಾನು ನಿರೀಕ್ಷಿಸುತ್ತೇನೆ. ನಿಮಗೆ ಹೆಚ್ಚು ಶಕ್ತಿ ದೊರಕಲಿ ಮತ್ತು ನನ್ನನ್ನು, ವಿಶೇಷವಾಗಿ ನನ್ನ ಕುಟುಂಬದ ಆರೋಗ್ಯವನ್ನು ನಿಮ್ಮ ಪ್ರಾರ್ಥನಾ ಉದ್ದೇಶಗಳಲ್ಲಿ ದಯವಿಟ್ಟು ಸೇರಿಸಿಕೊಳ್ಳಿ. ನಾನು ಕೆಲಸ ಮಾಡುತ್ತಿರುವ ಕುಟುಂಬವನ್ನೂ ದಯವಿಟ್ಟು ನಿಮ್ಮ ಪ್ರಾರ್ಥನಾ ಉದ್ದೇಶಗಳಲ್ಲಿ ಸೇರಿಸಿಕೊಳ್ಳಿ. ಅವರು ನನಗೆ ಬಹಳ ಒಳ್ಳೆಯವರಾಗಿದ್ದಾರೆ ಮತ್ತು ತಮ್ಮಲ್ಲಿ ಒಬ್ಬಳಂತೆ ನನ್ನನ್ನು ನೋಡಿಕೊಂಡಿದ್ದಾರೆ.
ಸಲಾಮತ್ ಪೊ (ಧನ್ಯವಾದಗಳು).
ಲೀಸೆಲ್ ಎಸ್ಪೊನಿಲಾ
ಕ್ವೆಜಾನ್ ಸಿಟಿ, ಫಿಲಿಪೀನ್ಸ್

# ಬೆಂಕಿಯ ರಥಗಳು

*(ಪುಟ 5 ರಿಂದ ಮುಂದುವರಿದಿದೆ)*

ರು, ನಿಗಾ ಇಡುವವರು ಎಂಬುದನ್ನು ಕೂಡ ನಂಬಿ, ಮತ್ತು ಪುನಃ, ಸರ್ವವ್ಯಾಪಿಯಾದ, ಅಂದರೆ ಒಂದೇ ಸಮಯಕ್ಕೆ ಎಲ್ಲೆಡೆಯೂ ಇರುವ, ಸರ್ವಶಕ್ತನಾದ ದೇವರನ್ನು ನಂಬಿ.

ನಿಮ್ಮ ಆಯ್ಕೆ ದೇವರು ಎಂಬುದಾದಲ್ಲಿ, ಈ ಪ್ರಾರ್ಥನೆಯನ್ನು ಹೇಳಿ. ಬಳಿಕ ತಂದೆಯಾದ ದೇವರು, ಪುತ್ರ ಹಾಗೂ ಪವಿತ್ರಾತ್ಮನ[21] ಹೆಸರಿನಲ್ಲಿ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ದೀಕ್ಷಾಸ್ನಾನ ಪಡೆಯಿರಿ. ಬೈಬಲ್ ಸೊಸೈಟಿ ಆಫ್ ಇಂಡಿಯಾದ ಕನ್ನಡದ 'ಸತ್ಯವೇದವು' ಬೈಬಲನ್ನು [ಇಂಗ್ಲಿಷಿನ ಕಿಂಗ್ ಜೇಮ್ಸ್ ಬೈಬಲ್] ಓದಿ ಹಾಗೂ ಅದು ಹೇಳುವುದನ್ನು ಮಾಡಿ[22].

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[33] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[34] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[35] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[36] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[37] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[38] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[39] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು, ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[40] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[41] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ. [42] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಮತ್ತು ಇನ್ನು ಮೇಲೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[43]**

ರಕ್ಷಣೆಯ ನಂತರ, ತಂದೆಯ, ಮಗನ, ಮತ್ತು ಪವಿತ್ರಾತ್ಮನ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರು ಎಂದು ಹೇಳಲಾಗುತ್ತದೆ.[44] ಬೈಬಲ್ ಸೊಸೈಟಿ ಆಫ್ ಇಂಡಿಯಾದ "ಸತ್ಯವೇದವು" [KAN-OV-063/86-87/5M/X1017 A] [ಇಂಗ್ಲಿಷ್ ಕಿಂಗ್ ಜೇಮ್ಸ್ ಆವೃತ್ತಿ] ಬೈಬಲ್ ಅನ್ನು ಶ್ರದ್ಧೆಯಿಂದ ಓದಿ, ಮತ್ತು ಅದು ಹೇಳಿದ್ದನ್ನು ಮಾಡಿ.[45]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ. ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ, ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೇವೆ ಎಂದು ಕೇಳುತ್ತೀರೋ? ದಶಮಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಮನೆಯಲ್ಲಿ [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಮಾಂಶವನ್ನು [ದಶಮಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವುದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**21** ಮತ್ತಾಯ 28:19-20, ಯೋಹಾನ 3:5, ಅಪೊಸ್ತಲರ ಕೃತ್ಯಗಳು 2:38, 19:3-5 **22** 2 ತಿಮೊಥೆಯನಿಗೆ 2:15, 3:14-17, ಯಾಕೋಬನಿಗೆ 1:22-25, ಪ್ರಕಟನೆ 3:18 **33** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **34** ಮತ್ತಾಯ 26:63-64, 27:54, ಲೂಕ 1:30-33, ಯೊಹಾನನು 9:35-37, ರೋಮಾಪುರದವರಿಗೆ 1:3-4 **35** ಅಪೊಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನನು 1:7, ಪ್ರಕಟನೆ 5:9 **36** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನನು 2:19, 21, 10:17-18, 11:25, ಅಪೊಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **37** ಲೂಕ 22:69, ಅಪೊಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **38** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **39** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನನು 1:7, ಪ್ರಕಟನೆ 1:5, 7:14 **40** ಮತ್ತಾಯ 26:28, ಅಪೊಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **41** ಮತ್ತಾಯ 21:22, ಯೋಹಾನನು 6:35, 37-40, ರೋಮಾಪುರದವರಿಗೆ 10:13 **42** ಇಬ್ರಿಯರಿಗೆ 11:6 **43** ಯೋಹಾನನು 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **44** ಮತ್ತಾಯ 28:18-20, ಯೋಹಾನನು 3:5, ಅಪೊಸ್ತಲರ ಕೃತ್ಯಗಳು 2:38, 19:3-5 **45** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯೂದನು 1:22-25, ಪ್ರಕಟನೆ 3:18


ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: (661) 252-5686 • Fax (661) 252-4362**

**www.alamoministries.com • info@alamoministries.com**


ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ಆರಾಧನೆಗಳನ್ನು ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ರಾತ್ರಿ 8 ಗಂಟೆಗೆ ಮತ್ತು ಇತರ ತಾಣಗಳಲ್ಲಿ ಪ್ರತಿ ರಾತ್ರಿ ನಡೆಸಲಾಗುತ್ತದೆ.

ಮಾಹಿತಿಗಾಗಿ ದಯವಿಟ್ಟು (908) 937-5723 ಗೆ ಕರೆ ಮಾಡಿ. ಪ್ರತಿ ಆರಾಧನೆಯ ನಂತರ ಊಟೋಪಚಾರವಿರುತ್ತದೆ.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ಆತ್ಮಗಳ ಕೊಯ್ಲಿನಲ್ಲಿ ಶ್ರಮಜೀವಿಯಾಗಿರಿ.*

*ನಮ್ಮ ಎಲ್ಲಾ ಸಾಹಿತ್ಯ ಮತ್ತು ಆಡಿಯೊ ಸಂದೇಶಗಳು, ಷಿಪಿಂಗ್ ಸೇರಿದಂತೆ ಶುಲ್ಕರಹಿತವಾಗಿವೆ. ಅವುಗಳಿಗಾಗಿ ನಿಮ್ಮಿಂದ ಯಾರಾದರೂ ಶುಲ್ಕ ಪಡೆಯಲು ಪ್ರಯತ್ನಿಸುತ್ತಿದ್ದರೆ, ದಯವಿಟ್ಟು (661) 252-5686 ಗೆ ಕಲೆಕ್ಟ್ ಕರೆ ಮಾಡಿ.*

**ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೊಸ್ತಲರ ಕೃತ್ಯಗಳು 4:12).**

**ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.**

**ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.**

**ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:**

© Copyright February 2013, 2015 All rights reserved World Pastor Tony Alamo ® Registered February 2013, 2015

KANNADA—VOLUME 17500—*CHARIOTS OF FIRE*